Officers Adda

# ಪ್ರಚಲಿತ ವಿದ್ಯಮಾನಗಳು

## Sept 06 to 08 2023

# ಮತ್ತೆ ಕಿರಿಕ್ ಮಾಡಿದ ಚೀನಾ
# ಅರುಣಾಚಲ್– ಅಕ್ಸಾಯ್ ಚಿನ್ ನಮ್ಮದೇ..!

- ✓ ದಾದಾಭಾಯಿ ನವರೋಜಿ
- ✓ ಪಿರೋಲಾ
- ✓ ಹೊಲೊಂಗಪರ್ ಗಿಬ್ಬನ್ ಅಭಯಾರಣ್ಯ
- ✓ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ
- ✓ ಅಸ್ಸಾಂನ ನೀಲಾಚಲ ಮೇಲ್ಸೇತುವೆ
- ✓ ಗ್ಲೋಬಲ್ ಇಂಡಿಯಾ ಎಐ 2023
- ✓ ಆರ್ ಮಾಧವನ್
- ✓ ವಿಕ್ರಂ ಲ್ಯಾಂಡರ್
- ✓ ASEAN ಇಂಡಿಯಾ ಶೃಂಗಸಭೆ
- ✓ ಧರ್ಮನ್ ಷಣ್ಮುಗರತ್ನಂ
- ✓ ಅಂತರ್ಜಲ ಮಟ್ಟ
- ✓ ಸತಾನ್ –2
- ✓ XPoSat
- ✓ ಅಡುಗೆ ಎಣ್ಣೆ ಆಮದು
- ✓ ಸಂಸತ್ ವಿಶೇಷ ಅಧಿವೇಶನ
- ✓ ಚಂದ್ರಯಾನ 3 ಸೆಂಚುರಿ
- ✓ INPC
- ✓ MICRO ISSUE
- ✓ ONE LINER
- ✓ GOLDEN THOUGHT



By BHARAT C N
BE (MECH)

ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನಗಳು
ಕನ್ನಡ ಮಾಧ್ಯಮದಲ್ಲಿ



Subscribe to

# OFFICERS ADDA

## You Tube & Telegram Channel

By BHARAT C N

# ಪ್ರತಿದಿನದ ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆ




For

## KAS/IAS/IPS/PSI/FDA/SDA/PC/BANKING

Exams

**Officers Adda YouTube channel By BHARAT sir**

Officers Adda
61.1K subscribers

Kannada Medium Current Affairs for all competitive exams (PC to DC) by BHARAT sir
For more updates subscribe to
OFFICERS ADDA telegram and You tube channel

Officers Adda Telegram channel :

https://t.me/officersadda

Course Details :

https://drive.google.com/file/d/1GuP8...

app link :

https://play.google.com/store/apps/de...

follow us on insta :

https://www.instagram.com/officersadd...

Telegram channel for essay and answers writing :

https://t.me/Art_Of_Answer_Writing1

June Current Affairs :

https://drive.google.com/file/d/1JROE...

oct current affairs :

https://drive.google.com/file/d/1KePH...

december current affairs:





IndianMoney's Finan...
Ad 4.2 ★ FREE
INSTALL


#Daily#Kannadamedium
#Top10MCQ #BharatSir #short

2.3K views · Streamed 23 hours ago

226 3 Live chat Share Dowı

Officers Adda
61.1K subscribers
SUBSCRIBED

ಗ್ರಾಮೀಣ ಪ್ರದೇಶದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ

# OFFICERS ADDA ದ ಉಚಿತ ಸೇವೆಗಳು

- ಪ್ರತಿದಿನದ ಪ್ರಚಲಿತ ವಿದ್ಯಮಾನಗಳು
- **(YouTube ನಲ್ಲಿ)**
- ಪ್ರಚಲಿತ ವಿದ್ಯಮಾನಗಳ ಪಿಡಿಎಫ್
- ಮಾಸಿಕ ಪ್ರಚಲಿತ ವಿದ್ಯಮಾನಗಳು ಕೈಪಿಡಿ **(officers adda telegram)**
- ಒಂದು ವರ್ಷದ ಪ್ರಚಲಿತ ವಿದ್ಯಮಾನಗಳ ಕೈಪಿಡಿ **(officers adda telegram)**
- **Art of Answer writing** ಇಲ್ಲಿ ಪ್ರತಿದಿನ ಪ್ರಬಂಧಗಳು, ಕೆಎಎಸ್ ಮುಖ್ಯ ಪರೀಕ್ಷೆಯ ಪ್ರಶ್ನೆಗಳು ಮತ್ತು ಪಿಎಸ್ಐ ಸಂಬಂಧಿತ ಭಾಷಾಂತರ ಕೊಡಲಾಗುತ್ತದೆ.

- ವಿದ್ಯಾರ್ಥಿಗಳೊಂದಿಗೆ ಗೂಗಲ್ ಮೀಟ್ ಮುಖಾಂತರ ಸಲಹೆ ಮತ್ತು ಸೂಚನೆ. (8217546761)
- Daily Practice MCQ's in Telegram and YouTube
- **Strategy classes for all type competitive exams**
- ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ಯೂಟ್ಯೂಬ್ ನಲ್ಲಿ ಚರ್ಚೆ
- ಸಾಧಕರ ಜೊತೆ ಸಂದರ್ಶನಗಳು.
- ಇನ್ನು ಹಲವಾರು



9:21
74%
Officers Adda V2
Officers Adda
Uninstall
Open
What's new
Last updated Sep 12, 2022
Bugs Fixing
About this app
Officers Adda is a hub for current affairs and Competitive exams preparation.
Education
4.7 ★
27 reviews
9.2 MB
12+
Rated for 12
OFFICERS ADDA
APP
Officers Adda

Let's start with
full Josh and full Enthusiasm




Officers Adda

- BIG ISSUES
- MINI ISSUES
- MICRO ISSUES
- INPC
- ONE LINER

Officers Adda

Officers Adda


- **BIG ISSUES**

Officers Adda

# INTERNATIONAL ISSUES




# ಮತ್ತೆ ಕಿರಿಕ್ ಮಾಡಿದ ಚೀನಾ



- ಹೊಸ ನಕಾಶೆಯಲ್ಲಿ ಚೀನಾ ಅರುಣಾಚಲ ಪ್ರದೇಶವನ್ನು ದಕ್ಷಿಣ ಟಿಬೆಟ್ ಎಂದು ಹಾಗೂ ಅಕ್ಸೈ ಚಿನ್ ಪ್ರದೇಶವನ್ನು ತನ್ನದೆಂದು ಹೇಳಿಕೊಂಡಿದೆ.

- ಈ ರೀತಿ ಹೇಳಿಕೊಳ್ಳುವುದು ಚೀನಾಗೆ ಒಂದು ಚಟವಾಗಿದೆ ಎಂದು ಜೈ ಶಂಕರ್ ಅವರು ಹೇಳಿದ್ದಾರೆ.


- ಈ ನಕಾಶೆಯನ್ನು ಬಿಡುಗಡೆ ಮಾಡಿದ್ದು ಚೀನಾದ ನೈಸರ್ಗಿಕ ಸಂಪನ್ಮೂಲ ಸಚಿವಾಲಯ.






Officers Adda



Disputed border
Disputed territory
Kashmir
Adminstered by Pakistan
No defined boundary
Aksai Chin
Adminstered by China
CHINA
Kashmir
Adminstered by India
PAKISTAN
Tibet
Autonomous Region
Chinese maps label this area as "South Tibet"
Lhasa
New Delhi
INDIA
NEPAL
Sikkim
Tawang
Arunachal Pradesh
BHUTAN


UZBEKISTAN
KYRGYZSTAN
TURKMENISTAN
TAJIKISTAN
AFGHANISTAN
IRAN
PAKISTAN
NEPAL
BHUTAN
TIBET
PEOPLE'S
REPUBLIC
OF CHINA
NORTH
KOREA
SOUTH
KOREA
JAPAN
TAIWAN
BANGLADESH
UAE
OMAN
INDIA
BURMA
VIETNAM
LAOS
THAILAND
CAMBODIA
PHILIPPINES



Ⓐ Administered by Pakistan; claimed by India
Ⓑ Administered by India
Ⓒ Administered by China; claimed by India
Ⓓ Administered by India; claimed by China
Ⓔ Taiwan under separate administration
KAZAKHSTAN
RUSSIA
UZBEKISTAN
Tashkent
Bishkek
KYRGYZSTAN
Dushanbe
TAJIKISTAN
AFGHANISTAN
Ürümqi
Kashgar
UYGUR AUTONOMOUS REGION OF XINJIANG
Ulaanbaatar
MONGOLIA
Islamabad
PAKISTAN
Lahore
Delhi
New Delhi
INDIA
NEPAL
Kathmandu
Thimphu
BHUTAN
BANGLADESH
Dhaka
Kolkata
Chittagong
MYANMAR
Nay Pyi Taw
THAILAND
LAOS
Vientiane
VIETNAM
Hanoi
CHINA
Beijing
NORTH KOREA
P'yŏngyang
Seoul
SOUTH KOREA
JAPAN
SEA OF JAPAN (EAST SEA)
YELLOW SEA
EAST CHINA SEA
SOUTH CHINA SEA
PHIL.
Tropic of Cancer
0 150 300 mi
0 200 400 km
BOUNDARIES
International
Disputed
Lines of control
© 2014 Encyclopædia Britannica, Inc.


Officers Adda





Officers Adda

- ಈ ಎರಡು ಪ್ರದೇಶಗಳು ಸ್ವಾಯುಕ್ತತೆಯನ್ನು ಬಯಸುತ್ತಿದ್ದವು.
- ಕ್ಸಿಂಜಿಯಾಂಗ್ ನಲ್ಲಿ ಮುಸ್ಲಿಮರು ಮತ್ತು ಟಿಬೆಟ್ ನಲ್ಲಿ ಬೌದ್ಧ ಧರ್ಮದವರು ಇದ್ದರು
- ಈ ಪ್ರದೇಶಗಳ ನಡುವೆ ಸಂಪರ್ಕ ಸಾಧಿಸಿ ನಿಯಂತ್ರಣದಲ್ಲಿ ಇಡುವುದು ಚೀನಾದ ಉದ್ದೇಶವಾಗಿತ್ತು ಹಾಗಾಗಿ ಇವುಗಳ ನಡುವೆ ಬರುವ ಭಾರತದ ಪ್ರದೇಶವನ್ನು ವಶಪಡಿಸಿಕೊಳ್ಳುವ ಹೊಂಚು ಮಾಡಿತು

Officers Adda

# 9dash line to 10dash line

- ಇದರ ಮೂಲಕ ಚೀನಾ ದೇಶ ತೈವಾನ್ ಕೂಡ ತನ್ನದೇ ಭಾಗ ಎಂದು ತೋರಿಸಿ ಕೊಂಡಿದೆ.




Officers Adda





Officers Adda




Officers Adda

# Pangong Lake (Finger Dispute)






Officers Adda


Tangtse
Taruk
Durbok
Lukung
Chilam
Harong
Spangmik
China claims till here
1
Grey Area
Man
2
3
Merak
4
5
6
7
8
India Army camp
Kangju Kangri
Chinese camp
India claims till here (LAC)
Chushul
Tukla
Rezang La

- ಹಿನ್ನೆಲೆ:

- ಭಾರತ–ಚೀನಾ ಗಡಿ ವಿವಾದವು 3,488 ಕಿಲೋಮೀಟರ್‌ಗಳ ಹಂಚಿಕೆಯ ಗಡಿಯಲ್ಲಿ ದೀರ್ಘಕಾಲದ ಮತ್ತು ಸಂಕೀರ್ಣವಾದ ಪ್ರಾದೇಶಿಕ ವಿವಾದಗಳನ್ನು ಹೊಂದಿದೆ.

- ವಿವಾದದ ಪ್ರಮುಖ ಕ್ಷೇತ್ರಗಳೆಂದರೆ ಪಶ್ಚಿಮ ವಲಯದಲ್ಲಿರುವ ಅಕ್ಸಾಯ್ ಚಿನ್ ಮತ್ತು ಪೂರ್ವ ವಲಯದಲ್ಲಿರುವ ಅರುಣಾಚಲ ಪ್ರದೇಶ.

- ಅಕ್ಸಾಯ್ ಚಿನ್: ಅಕ್ಸಾಯ್ ಚಿನ್ ಅನ್ನು ತನ್ನ ಕ್ಸಿನ್‌ಜಿಯಾಂಗ್ ಪ್ರದೇಶದ ಭಾಗವೆಂದು ಚೀನಾ ಹೇಳಿಕೊಂಡರೆ, ಭಾರತವು ತನ್ನ ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನ ಭಾಗವೆಂದು ಪರಿಗಣಿಸುತ್ತದೆ.

Officers Adda

- ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (CPEC) ಗೆ ಸಾಮೀಪ್ಯ ಮತ್ತು ಮಿಲಿಟರಿ ಸಾಮರ್ಥ್ಯದಿಂದಾಗಿ ಈ ಪ್ರದೇಶವು ಕಾರ್ಯತಂತ್ರದ ಮಹತ್ವವನ್ನು ಹೊಂದಿದೆ.
- **ಅರುಣಾಚಲ ಪ್ರದೇಶ:** ಚೀನಾ ಅರುಣಾಚಲ ಪ್ರದೇಶವನ್ನು "ದಕ್ಷಿಣ ಟಿಬೆಟ್" ಎಂದು ಉಲ್ಲೇಖಿಸಿ, ಹಕ್ಕು ಸಾಧಿಸುತ್ತದೆ


Officers Adda

- ಚೀನಾದ ಸುಮಾರು 11 ಪ್ರದೇಶಗಳ ಹೆಸರನ್ನು ಬದಲಾವಣೆ ಮಾಡಿದೆ.
- ಈ ರೀತಿ ಮಾಡುವುದರ ಮೂಲಕ ಜನರಲ್ಲಿ ಗೊಂದಲ ಸೃಷ್ಟಿ ಮಾಡುವುದು ಮತ್ತು ಪ್ರವಾಸೋದ್ಯಮಕ್ಕೆ ಹೊಡೆತ ಬೀಳುವಂತೆ ಮಾಡುವುದು ಚೀನಾದ ಉದ್ದೇಶ.
- ಭಾರತ ಅರುಣಾಚಲ ಪ್ರದೇಶದಲ್ಲಿ ಜಿ ಟ್ವೆಂಟಿ ಸಭೆಗಳನ್ನು ನಡೆಸಿದ ನಂತರ ಈ ರೀತಿ ಚೀನಾ ಮಾಡುತ್ತಿರುವುದು ಮೂರನೇ ಬಾರಿಗೆ.
- ಚೀನಾದ ವಿಧಿ 7ರ ಪ್ರಕಾರ ರಾಷ್ಟ್ರೀಯ ಗಡಿಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಸರ್ಕಾರದ ಕರ್ತವ್ಯ ಎಂದು ಹೇಳುತ್ತದೆ.

Officers Adda

- ಇತ್ತೀಚೆಗೆ ನರೇಂದ್ರ ಮೋದಿಯವರು ಹೀಗೆ ಹೇಳಿದ್ದಾರೆ

- ಭಾರತ ದೇಶವು ತನ್ನ ನೆಲದ ಯಾವುದೇ ಭಾಗದಲ್ಲಿ ಯಾವುದೇ ಸಭೆಗಳನ್ನು ನಡೆಸಲು ಯಾರ ಒಪ್ಪಿಗೆಯನ್ನು ಕೇಳಬೇಕಾಗಿಲ್ಲ.



- ಅರುಣಾಚಲ ಪ್ರದೇಶವನ್ನು 1972ರ ವರೆಗೆ ನಾರ್ತ್ ಈಸ್ಟ್ ಫ್ರಂಟಿಯರ್ ಏಜೆನ್ಸಿ ಎಂದು ಕರೆಯಲಾಗುತ್ತಿತ್ತು.

- ಅರುಣಾಚಲ ಪ್ರದೇಶ ರಾಜ್ಯ ಟಿಬೆಟ್, ಭೂತಾನ್ ಮತ್ತು ಮಯನ್ಮಾರ್ ದೇಶಗಳ ಜೊತೆಗೆ ಗಡಿ ಹಂಚಿಕೊಂಡಿದೆ.

- ಇಡೀ ಈಶಾನ್ಯ ರಾಜ್ಯಗಳಿಗೆ ಇದೊಂದು ರಕ್ಷಾ ಕವಚದಂತೆ ಕೆಲಸ ಮಾಡುತ್ತದೆ.

- ಅರುಣಾಚಲ ಪ್ರದೇಶದ ತವಾಂಗ ಕಣಿವೆಯ ಮೇಲೆ ಚೀನಾದ ಕಣ್ಣಿದೆ.

- ಈ ಕಣಿವೆಗೆ ದಲಾಯಿಲಾಮ ಅವರು ಭೇಟಿ ನೀಡಿದ್ದರು ಮತ್ತು ಇಲ್ಲಿ ಬೌದ್ಧ ಧರ್ಮದ ಎರಡನೇ ಅತಿ ದೊಡ್ಡ monastery ಇದೆ.

Officers Adda

- ಹೀಗಾಗಿ ಇದು ಟಿಬೆಟ್ ನ ಭಾಗ ಎಂದು ಚೀನಾವಾದಿಸುತ್ತದೆ.
- ಅರುಣಾಚಲ ಪ್ರದೇಶದ ಕೆಲವು ಆದಿವಾಸಿ ಜನಾಂಗಗಳು ಟಿಬೆಟ್ ನ ಜೊತೆಗೆ ಸಾಂಸ್ಕೃತಿಕ ಸಂಬಂಧವನ್ನು ಹೊಂದಿದ್ದಾರೆ.
- 1959ರಲ್ಲಿ ದಲಾಯಿಲಾಮ ಅವರು ಈ ಪ್ರದೇಶದ ಮೂಲಕವೇ ಭಾರತಕ್ಕೆ ಬಂದಿದ್ದರು.

Officers Adda

- ಚೀನಾದ ಈ ಹೊಸ ನಕಾಶೆಯೊಂದಿಗೆ ಸುಮಾರು ಆರು ದೇಶಗಳನ್ನು ಎದುರು ಹಾಕಿಕೊಳ್ಳುತ್ತಿದೆ

- ರಷ್ಯಾದ ಸಣ್ಣ ಭಾಗವನ್ನು ತನ್ನದೆಂದು ತೋರಿಸಿ ಕೊಂಡಿದೆ ಆದರೆ ರಷ್ಯಾ ಯಾವ ಉತ್ತರವನ್ನು ನೀಡಿಲ್ಲ.

Officers Adda

# China Standard Map Edition 2023




Officers Adda

- ಭಾರತ ಕೂಡ ಹೊಸದಾದ ನಕಾಶೆಯನ್ನು ಬಿಡುಗಡೆ ಮಾಡುವ ಅವಶ್ಯಕತೆ ಇದೆ ಮತ್ತು ಸಾಕಷ್ಟು ಮಾಹಿತಿಯನ್ನು ಜಗತ್ತಿಗೆ ತಿಳಿಸಬೇಕಾದ ಅನಿವಾರ್ಯತೆ ಇದೆ.

Officers Adda

# Suggest if you have any Innovative ideas

Officers Adda

Officers Adda

OFFICERS ADDA

# Communication Crash Course 3.0

# Communication Paper

**ವಿಶೇಷತೆಗಳು**

ಸಾಮಾನ್ಯ ಕನ್ನಡ

ಸಾಮಾನ್ಯ ಇಂಗ್ಲಿಷ್

ಕಂಪ್ಯೂಟರ್ ಜ್ಞಾನ

ಪಿಡಿಎಫ್ ನೋಟ್ಸ್

45 ದಿನಗಳ Crash Course

Helpful for **Group C / CTI / PDO / SDA / FDA**

RECORDED AND LIVE CLASSES WITH MCQ

Last date to join
September 15,2023

**Contact : 8217546761 / 8217583629**

# ಸಾಮಾನ್ಯ ಕನ್ನಡ ವಿಷಯದ ಪಠ್ಯಕ್ರಮ

1. ವರ್ಣಮಾಲೆ, ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರ
2. ಸಂಧಿ ಪ್ರಕರಣ
3. ದೇಶ – ಅನ್ಯದೇಶ್ಯ, ತತ್ಸಮ–ತದ್ಭವ
4. ನಾಮಪದ
5. ಕ್ರಿಯಾಪದ
6. ಸಮಾಸ ಪ್ರಕರಣ
7. ವಾಕ್ಯಗಳು
8. ದ್ವಿರುಕ್ತಿ – ಜೋಡುನುಡಿ
9. ಅನುಕರಣ ವ್ಯಯ
10. ವಿರುದ್ಧಾರ್ಥಕ ಪದಗಳು, ಸಮಾನಾರ್ಥಕ ಪದಗಳು
9. ಛಂದಸ್ಸು
10. ಅಲಂಕಾರಶಾಸ್ತ್ರ


ಮುಂತಾದವು....

# Syllabus for General English

1.Parts of Speech
a.Nouns
b.Pronouns
c.Adjectives
d.Verbs
e.Adverbs
f.Prepositions
g.Conjunctions
i. Interjections
2.Articles
3.Tenses
4.Sentences and its types
5.Active Voices
6.Question tags
7.Direct and Indirect Speech
8.Degrees of Comparison
9.Figures of Speech
10.Phrases and Idioms
11.Phrasal Verbs
12.One word substitutions
12.Vocabulary
- Antonyms, Synonyms, Prefixes, Suffixes, Homophones, Homonyms Etc....

# Syllabus for Computer Literacy

1 Introduction Of Computer
2 CPU And Input Output Devices
3 Computer Memory
4 Hardware And Software
5 Computer Virus And Security
6 Internet, Networking And Data Communication
7 Computer Programming Languages, Logic Gates And Number System
8 Ms Office A) Word B) Powerpoint C) Excell




# LAST DATE TO JOIN

# SEPT 15, 2023

- **MINI ISSUES**

Officers Adda

# ದಾದಾಭಾಯಿ ನವರೋಜಿ



- ಸೆಪ್ಟೆಂಬರ್ 4, 2023 ದೇಶದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಕೆರಳಿಸಿದ ಮೊದಲ ನಾಯಕರಲ್ಲಿ ಒಬ್ಬರಾದ "ಭಾರತದ ಗ್ರ್ಯಾಂಡ್ ಓಲ್ಡ್ ಮ್ಯಾನ್" ದಾದಾಭಾಯಿ ನೌರೋಜಿಯವರ 198 ನೇ ಜನ್ಮದಿನವಾಗಿತ್ತು.
- ಇಂದಿನ ಗುಜರಾತ್‌ನ ನವಸಾರಿಯಲ್ಲಿ 1825 ರಲ್ಲಿ ಜನಿಸಿದರು. ಅವರು ತಮ್ಮ 'ಪಾವರ್ಟಿ ಮತ್ತು ಅನ್-ಬ್ರಿಟಿಶ್ ರೂಲ್ ಇನ್ ಇಂಡಿಯಾ' ಎಂಬ ಪುಸ್ತಕದಲ್ಲಿ ಡ್ರೈನ್ ಸಿದ್ಧಾಂತವನ್ನು ಪ್ರಸ್ತಾಪಿಸಿದರು ಮತ್ತು ಭಾರತದ ಬ್ರಿಟಿಷ್ ಶೋಷಣೆಯನ್ನು ವಿವರಿಸಿದರು.
- ಪ್ರಮುಖ ಕೊಡುಗೆಗಳು:
- ಅವರು ಆರಂಭಿಕ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನೊಂದಿಗೆ ನಿಕಟವಾಗಿ ತೊಡಗಿಸಿಕೊಂಡಿದ್ದರು.

Officers Adda

- ದಾದಾಭಾಯಿ ನೌರೋಜಿ ಅವರು ಭಾರತದ ಗ್ರ್ಯಾಂಡ್ ಓಲ್ಡ್ ಮ್ಯಾನ್ ಮತ್ತು ದೇಶದ ಅನಧಿಕೃತ ರಾಯಭಾರಿ ಎಂದು ಕರೆಯುತ್ತಾರೆ.
- ಅವರು ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ಗೆ ಆಯ್ಕೆಯಾದ ಮೊದಲ ಭಾರತೀಯರಾಗಿದ್ದರು.
- ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕ ಸದಸ್ಯರಾಗಿದ್ದರು ಮತ್ತು ಮೂರು ಕಾಂಗ್ರೆಸ್ ಅಧಿವೇಶನಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

Officers Adda

- ಅವರು ಬ್ರಿಟಿಷ್ ಸಂಸತ್ತಿನ ಮೊದಲ ಭಾರತೀಯ ಸದಸ್ಯರಾಗಿ ಸೇವೆ ಸಲ್ಲಿಸಿದರು.
- ಅವರ ಮೊದಲ ಆಂದೋಲನ, 1859 ರಲ್ಲಿ, ಭಾರತೀಯ ನಾಗರಿಕ ಸೇವೆಗೆ ನೇಮಕಾತಿಗೆ ಸಂಬಂಧಿಸಿದೆ.
- 1865 ಮತ್ತು 1866 ರಲ್ಲಿ, ನೌರೋಜಿ ಅವರು ಲಂಡನ್ ಇಂಡಿಯನ್ ಸೊಸೈಟಿ ಮತ್ತು ಈಸ್ಟ್ ಇಂಡಿಯಾ ಅಸೋಸಿಯೇಷನ್ ಅನ್ನು ಸ್ಥಾಪಿಸಲು ಸಹಾಯ ಮಾಡಿದರು, ಎರಡು ಸಂಸ್ಥೆಗಳು ರಾಷ್ಟ್ರೀಯವಾದಿ ಭಾರತೀಯರನ್ನು ಮತ್ತು ಸಹಾನುಭೂತಿಯುಳ್ಳ ಬ್ರಿಟನ್ನರನ್ನು ಒಂದೇ ವೇದಿಕೆಯಲ್ಲಿ ತರಲು ಪ್ರಯತ್ನಿಸಿದವು.

Officers Adda

Officers Adda


- 1885 ರಲ್ಲಿ, ನೌರೋಜಿ ಅವರು ಬಾಂಬೆ ಪ್ರೆಸಿಡೆನ್ಸಿ ಅಸೋಸಿಯೇಶನ್‌ನ ಉಪಾಧ್ಯಕ್ಷರಾದರು, ಗವರ್ನರ್ ಲಾರ್ಡ್ ರೇ ಅವರಿಂದ ಬಾಂಬೆ ಶಾಸಕಾಂಗ ಮಂಡಳಿಗೆ ನಾಮನಿರ್ದೇಶನಗೊಂಡರು.
- ಅವರು 1886, 1893 ಮತ್ತು 1906 ರಲ್ಲಿ ಮೂರು ಬಾರಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು.
- 1893 ರಲ್ಲಿ, ಅವರು ಭಾರತೀಯ ಹಿತಾಸಕ್ತಿಗಳನ್ನು ಪರಿಹರಿಸಲು ಭಾರತೀಯ ಸಂಸದೀಯ ಸಮಿತಿಯನ್ನು ರಚಿಸಲು ಸಹಾಯ ಮಾಡಿದರು.
- 1895 ರಲ್ಲಿ, ಅವರು ಭಾರತೀಯ ವೆಚ್ಚದ ರಾಯಲ್ ಆಯೋಗದ ಸದಸ್ಯರಾದರು.

Officers Adda

# NATIONAL ISSUES



# ಪಿರೋಲಾ



Officers Adda

- ಪಿರೋಲಾ ಹಲವಾರು ರೂಪಾಂತರಗಳನ್ನು ಪಡೆದುಕೊಂಡಿದೆ, ಅದು ಹೆಚ್ಚು ಹರಡುತ್ತದೆ ಮತ್ತು ಲಸಿಕೆಗಳು ಮತ್ತು ಚಿಕಿತ್ಸೆಗಳಿಗೆ ಹೆಚ್ಚು ನಿರೋಧಕವಾಗಿದೆ.

- "ಪಿರೋಲಾ" ಅಥವಾ **BA.2.86** ಎಂಬ ಹೊಸ ರೂಪಾಂತರವು ಪ್ರಪಂಚದಾದ್ಯಂತ ವೇಗವಾಗಿ ಹರಡುವುದರಿಂದ ಜಗತ್ತು **COVID-19** ಸೋಂಕಿನ ಮತ್ತೊಂದು ಅಲೆಯನ್ನು ಎದುರಿಸುತ್ತಿದೆ.

Officers Adda

- ವೈರಸ್‌ಗಳು, ವಿಶೇಷವಾಗಿ ಆರ್‌ಎನ್‌ಎಯನ್ನು ತಮ್ಮ ಆನುವಂಶಿಕ ವಸ್ತುವಾಗಿ (ಕೊರೊನಾವೈರಸ್‌ಗಳಂತೆ) ಹೊಂದಿರುವವುಗಳು ಕಾಲಾನಂತರದಲ್ಲಿ ರೂಪಾಂತರಗೊಳ್ಳುತ್ತವೆ.

- ವೈರಸ್‌ನ ಆನುವಂಶಿಕ ವಸ್ತುಗಳ Duplication ಸಮಯದಲ್ಲಿ ರೂಪಾಂತರಗಳು ಸಂಭವಿಸುತ್ತವೆ .

- Omicron ನ XBB.1.5 ರೂಪಾಂತರಕ್ಕೆ ಹೋಲಿಸಿದರೆ Pirola ರೂಪಾಂತರವು ಅದರ ಸ್ಪೈಕ್ ಪ್ರೋಟೀನ್‌ನಲ್ಲಿ 30 ಕ್ಕಿಂತ ಹೆಚ್ಚು ರೂಪಾಂತರಗಳನ್ನು ಹೊಂದಿದೆ.

- ಪಿರೋಲಾ ರೂಪಾಂತರವು US, UK ಮತ್ತು ಇತರವುಗಳನ್ನು ಒಳಗೊಂಡಂತೆ ಹಲವಾರು ದೇಶಗಳಲ್ಲಿ ಪತ್ತೆಯಾಗಿದೆ.

- ಪಿರೋಲಾ ಹೆಚ್ಚು ತೀವ್ರವಾದ ಕಾಯಿಲೆ, ಆಸ್ಪತ್ರೆಗೆ ಅಥವಾ ಸಾವಿಗೆ ಕಾರಣವಾಗಬಹುದು ಎಂಬುದು ಪ್ರಸ್ತುತ ಅಸ್ಪಷ್ಟವಾಗಿದೆ.

Officers Adda

OFFICERS ADDA

# DRUSHTI 3.0

SPECIAL COURSE FOR 2 YEARS CURRENT AFFAIRS

(2022 & 2023)

SUBJECT WISE CURRENT AFFAIRS VIDEOS

2000+ VIDEOS

MONTHLY AND YEARLY SUBJECT WISE PDF


WEEKLY TEST ON DAILY CURRENT AFFAIRS

LAST DATE TO JOIN

SEPT 10,2023

CONTACT

8217546761 / 8217583629




Officers Adda

# LAST DATE TO JOIN

# SEPT 10, 2023

- # MICRO ISSUES

## ISSUES BASED COLOURS

Officers Adda

# ಹೊಲೊಂಗಪರ್ ಗಿಬ್ಬನ್ ಅಭಯಾರಣ್ಯ

- ಹೊಲೊಂಗಪರ್ ಗಿಬ್ಬನ್ ಅಭಯಾರಣ್ಯ
- ಪೂರ್ವ ಅಸ್ಸಾಂನಲ್ಲಿರುವ ಹೊಲೊಂಗಪರ್ ಗಿಬ್ಬನ್ ಅಭಯಾರಣ್ಯವನ್ನು ವಿಭಜಿಸಿದ 1.65–ಕಿಮೀ ಉದ್ದದ ರೈಲ್ವೆ ಹಳಿ.



- ಹೂಲಾಕ್ ಗಿಬ್ಬನ್‌ಗಳು, ಎಲ್ಲಾ ಮಂಗಗಳಿಗಿಂತ ಚಿಕ್ಕದಾದ ಮತ್ತು ವೇಗವಾದವು ಎಂದು ಕರೆಯಲ್ಪಡುತ್ತವೆ, ಆಗ್ನೇಯ ಏಷ್ಯಾದಲ್ಲಿ ಉಷ್ಣವಲಯದ ಮತ್ತು ಉಪೋಷ್ಣವಲಯದ ಕಾಡುಗಳಲ್ಲಿ ವಾಸಿಸುತ್ತವೆ.

- ಅವು ಹೆಚ್ಚಿನ ಬುದ್ಧಿವಂತಿಕೆ, ವಿಭಿನ್ನ ವ್ಯಕ್ತಿತ್ವಗಳು ಮತ್ತು ಇತರ ಮಂಗಗಳಂತೆಯೇ ಬಲವಾದ ಕುಟುಂಬ ಬಂಧಗಳನ್ನು ಹೊಂದಿದ್ದಾರೆ.

- ಇವು ಪ್ರಪಂಚದಾದ್ಯಂತ ಕಂಡುಬರುವ 20 ಗಿಬ್ಬನ್ ಜಾತಿಗಳಲ್ಲಿ ಒಂದನ್ನು ಪ್ರತಿನಿಧಿಸುತ್ತವೆ.

- ಹೂಲಾಕ್ ಗಿಬ್ಬನ್ಸ್ ಭಾರತದ ಏಕೈಕ ಕೋತಿ ಜಾತಿಯಾಗಿದೆ.

Officers Adda

- ಭಾರತದಲ್ಲಿ ಗಿಬ್ಬನ್ ಪ್ರಭೇದಗಳು

- ಇದು ಈಶಾನ್ಯದ ಎಲ್ಲಾ ರಾಜ್ಯಗಳಲ್ಲಿ ಕಂಡುಬರುತ್ತದೆ, ಬ್ರಹ್ಮಪುತ್ರ ನದಿಯ ದಕ್ಷಿಣ ಮತ್ತು ದಿಬಾಂಗ್ ನದಿಯ ಪೂರ್ವದ ನಡುವೆ ಕಂಡುಬರುತ್ತದೆ.

- ಭಾರತದ ಹೊರಗೆ, ಇದು ಪೂರ್ವ ಬಾಂಗ್ಲಾದೇಶ ಮತ್ತು ವಾಯುವ್ಯ ಮ್ಯಾನ್ಮಾರ್‌ನಲ್ಲಿ ಕಂಡುಬರುತ್ತದೆ .

- ಇಂಟರ್ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ಸ್ ರೆಡ್ ಲಿಸ್ಟ್ (IUCN): ಅಳಿವಿನಂಚಿನಲ್ಲಿರುವ ಪ್ರಭೇದ ವಾಗಿದೆ.

Officers Adda

- ಪೂರ್ವ ಹೂಲಾಕ್ ಗಿಬ್ಬನ್ (ಹೂಲಾಕ್ ಲ್ಯುಕೋನೆಡಿಸ್):

- ಇದು ಭಾರತದಲ್ಲಿ ಅರುಣಾಚಲ ಪ್ರದೇಶ ಮತ್ತು ಅಸ್ಸಾಂನಲ್ಲಿ ಮತ್ತು ಭಾರತದ ಹೊರಗೆ ದಕ್ಷಿಣ ಚೀನಾ ಮತ್ತು ಈಶಾನ್ಯ ಮ್ಯಾನ್ಮಾರ್‌ನಲ್ಲಿ ವಾಸಿಸುತ್ತದೆ.

- ಭಾರತದಲ್ಲಿ, ಎರಡೂ ಜಾತಿಗಳನ್ನು ಭಾರತೀಯ (ವನ್ಯಜೀವಿ) ಸಂರಕ್ಷಣಾ ಕಾಯಿದೆ 1972 ರ schedule 1 ರಲ್ಲಿ ಪಟ್ಟಿ ಮಾಡಲಾಗಿದೆ.

- ಗಿಬ್ಬನ್‌ಗಳು ಪ್ರತ್ಯೇಕವಾಗಿ ವೃಕ್ಷಜೀವಿಗಳಾಗಿವೆ, ಉಷ್ಣವಲಯದ ಕಾಡುಗಳ ಮರದ ತುದಿಗಳಲ್ಲಿ ತಮ್ಮ ಜೀವನವನ್ನು ಕಳೆಯುತ್ತವೆ.

Officers Adda

- **ಗಿಬ್ಬನ್ ಅಭಯಾರಣ್ಯ:**

- **ಹೂಲೋಂಗಪರ್ ಗಿಬ್ಬನ್ ಅಭಯಾರಣ್ಯವನ್ನು ಹಿಂದೆ ಗಿಬ್ಬನ್ ವನ್ಯಜೀವಿ ಅಭಯಾರಣ್ಯ ಎಂದು ಕರೆಯಲಾಗುತ್ತಿತ್ತು , ಇದು ಭಾರತದ ಅಸ್ಸಾಂನ ಜೋರ್ಹತ್ ಜಿಲ್ಲೆಯಲ್ಲಿದೆ.**

- **1997 ರಲ್ಲಿ ಸ್ಥಾಪಿತವಾದ ಇದು ಶ್ರೀಮಂತ ಜೀವವೈವಿಧ್ಯತೆಯನ್ನು ಹೊಂದಿದೆ, ಇದು ಭಾರತದ ಏಕೈಕ ಗಿಬ್ಬನ್‌ಗಳು, ಪಶ್ಚಿಮ ಹೂಲಾಕ್ ಹೂಲಾಕ್ ಗಳನ್ನು ಹೊಂದಿದೆ.**



# ಪ್ರಧಾನ ಮಂತ್ರಿ ಜನ್ ಧನ್ ಯೋಜನೆ

- ಪ್ರಧಾನ ಮಂತ್ರಿ ಜನ್ ಧನ್ ಯೋಜನೆ
- ಪ್ರಧಾನ ಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ) ಒಂಬತ್ತು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ .
- ಇದನ್ನು ಆಗಸ್ಟ್ 28, 2014 ರಂದು ಪ್ರಾರಂಭಿಸಲಾಯಿತು ಮತ್ತು ದುರ್ಬಲ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕೈಗೆಟುಕುವ ಆರ್ಥಿಕ ಸೇವೆಗಳನ್ನು ಒದಗಿಸಲು ಹಣಕಾಸು ಸಚಿವಾಲಯದ ನೇತೃತ್ವದಲ್ಲಿ ಜಾಗತಿಕವಾಗಿ ಅತಿದೊಡ್ಡ ಹಣಕಾಸು ಸೇರ್ಪಡೆ ಉಪಕ್ರಮಗಳಲ್ಲಿ ಒಂದಾಗಿದೆ.
- PMJDY ಪ್ರತಿ ಮನೆಗೆ ಕನಿಷ್ಠ ಒಂದು ಮೂಲಭೂತ ಬ್ಯಾಂಕಿಂಗ್ ಖಾತೆಯೊಂದಿಗೆ ಬ್ಯಾಂಕಿಂಗ್ ಸೌಲಭ್ಯಗಳಿಗೆ ಸಾರ್ವತ್ರಿಕ ಪ್ರವೇಶಕ್ಕಾಗಿ ವೇದಿಕೆಯನ್ನು ಸೃಷ್ಟಿಸುತ್ತದೆ.

Officers Adda

- PMJDY ನ ವೈಶಿಷ್ಟ್ಯಗಳು:
- ಇದು ಶಾಖೆಗಳು ಮತ್ತು ಬ್ಯಾಂಕಿಂಗ್ ಕರೆಸ್ಪಾಂಡೆಂಟ್‌ಗಳ (BCs) ಮೂಲಕ ಬ್ಯಾಂಕಿಂಗ್ ಸೇವೆಗಳನ್ನು ವಿಸ್ತರಿಸುವ ಗುರಿಯನ್ನು ಹೊಂದಿದೆ.
- ಇದು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಿದೆ ಮತ್ತು ಖಾತೆಯನ್ನು ತೆರೆಯುವವರಿಗೆ ಸ್ಥಳೀಯ ಡೆಬಿಟ್ ಕಾರ್ಡ್ (ರುಪೇ ಕಾರ್ಡ್) ಸಿಗುತ್ತದೆ.
- PMJDY ಖಾತೆಗಳಲ್ಲಿ ಯಾವುದೇ ಕನಿಷ್ಠ ಬ್ಯಾಲೆನ್ಸ್ ಅನ್ನು ನಿರ್ವಹಿಸುವ ಅಗತ್ಯವಿಲ್ಲ
- PMJDY ಖಾತೆದಾರರಿಗೆ ನೀಡಲಾದ ರುಪೇ ಕಾರ್ಡ್‌ನೊಂದಿಗೆ ರೂ.1 ಲಕ್ಷದ ಅಪಘಾತ ವಿಮಾ ಕವರ್ (28.8.2018 ರ ನಂತರ ತೆರೆಯಲಾದ ಹೊಸ PMJDY ಖಾತೆಗಳಿಗೆ ರೂ. 2 ಲಕ್ಷಕ್ಕೆ ಹೆಚ್ಚಿಸಲಾಗಿದೆ) ಲಭ್ಯವಿದೆ

Officers Adda

- ಇದು ಪ್ರತಿ ಅರ್ಹ ವಯಸ್ಕರಿಗೆ 10,000 ರೂ.ಗಳ ಓವರ್‌ಡ್ರಾಫ್ಟ್ ಸೌಲಭ್ಯವನ್ನು ಒದಗಿಸುತ್ತದೆ .

- ಜನ್ ಧನ್-ಆಧಾರ್-ಮೊಬೈಲ್ (JAM) ಆರ್ಕಿಟೆಕ್ಚರ್ ಸಾಮಾನ್ಯ ನಾಗರಿಕರ ಖಾತೆಗಳಿಗೆ ಸರ್ಕಾರದ ಪ್ರಯೋಜನಗಳನ್ನು ತಡೆರಹಿತ ವರ್ಗಾವಣೆಯನ್ನು ಸಕ್ರಿಯಗೊಳಿಸಿದೆ.

Officers Adda

# ಅಸ್ಸಾಂನ ಅತಿ ಉದ್ದದ ನೀಲಾಚಲ ಮೇಲ್ಸೇತುವೆ ಉದ್ಘಾಟನೆ.

- ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಮಾಲಿಗಾಂವ್ ಚರಿಯಾಲಿಯನ್ನು ಗುವಾಹಟಿಯ ಕಾಮಾಖ್ಯ ಗೇಟ್‌ಗೆ ಸಂಪರ್ಕಿಸುವ 2.63 ಕಿಲೋಮೀಟರ್ ಅಳತೆಯ ರಾಜ್ಯದ ಅತಿ ಉದ್ದದ ಮೇಲ್ಸೇತುವೆಯಾದ ನೀಲಾಚಲ ಮೇಲ್ಸೇತುವೆಯನ್ನು ಅನಾವರಣಗೊಳಿಸಿದರು.

- ₹ 420.75 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಈ ಯೋಜನೆಯನ್ನು ಶ್ರೀ ಗೌತಮ್ ಕನ್‌ಸ್ಟ್ರಕ್ಷನ್ ಕಂ ಲಿಮಿಟೆಡ್ ಮತ್ತು ಅನುಪಮ್ ನಿರ್ಮಾಣ್ ಪ್ರೈವೇಟ್ ಲಿಮಿಟೆಡ್‌ನಿಂದ 35 ತಿಂಗಳೊಳಗೆ ಪೂರ್ಣಗೊಳಿಸಲಾಗಿದೆ.

Officers Adda

- ನೀಲಾಚಲ ಮೇಲ್ಸೇತುವೆಯು ಅಸ್ಸಾಂನ ಅತಿ ಉದ್ದದ ಮೇಲ್ಸೇತುವೆಯಾಗಿದ್ದು, 2.63 ಕಿಲೋಮೀಟರ್‌ಗಳಷ್ಟು ವ್ಯಾಪಿಸಿದೆ ಮತ್ತು ಮಾಲಿಗಾಂವ್ ಚರಿಯಾಲಿಯನ್ನು ಗುವಾಹಟಿಯ ಕಾಮಾಖ್ಯ ಗೇಟ್‌ಗೆ ಸಂಪರ್ಕಿಸುತ್ತದೆ.

- ಗುವಾಹಟಿಯನ್ನು "ಈಶಾನ್ಯಕ್ಕೆ ಹೆಬ್ಬಾಗಿಲು" ಮಾತ್ರವಲ್ಲದೆ "ಆಗ್ನೇಯ ಏಷ್ಯಾದ ಹೆಬ್ಬಾಗಿಲು" ಎಂದು ಶರ್ಮಾ ಕಲ್ಪಿಸಿಕೊಂಡಿದ್ದಾರೆ.



# ಗ್ಲೋಬಲ್ ಇಂಡಿಯಾ ಎಐ 2023

- ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಅಕ್ಟೋಬರ್‌ನಲ್ಲಿ ಗ್ಲೋಬಲ್ ಇಂಡಿಯಾ ಎಐ 2023 ಸಮ್ಮೇಳನವನ್ನು ಆಯೋಜಿಸಲು ಸಿದ್ಧವಾಗಿದೆ.

- ಭಾರತ ಮತ್ತು ವಿಶ್ವಾದ್ಯಂತ ಸಂಶೋಧಕರು, ಸ್ಟಾರ್ಟ್‌ಅಪ್‌ಗಳು ಮತ್ತು ಹೂಡಿಕೆದಾರರನ್ನು ಒಳಗೊಂಡಂತೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI) ಕ್ಷೇತ್ರದಲ್ಲಿ ಪ್ರಮುಖರನ್ನು ಒಟ್ಟುಗೂಡಿಸುವ ಗುರಿಯನ್ನು ಈವೆಂಟ್ ಹೊಂದಿದೆ.

Officers Adda

# IMPORTANT NEWS PAPER CUTTINGS

# INPC

# ಮಾಧವನ್ ಎಫ್‌ಟಿಐಐ ಅಧ್ಯಕ್ಷ



ನವದೆಹಲಿ (ಪಿಟಿಐ): ಪುಣೆಯ ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ (ಎಫ್‌ಟಿ ಐಐ) ಅಧ್ಯಕ್ಷರಾಗಿ ನಟ, ಚಿತ್ರ ನಿರ್ಮಾಪಕ ಆರ್. ಮಾಧವನ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಈ ಕುರಿತ ಸುದ್ದಿಯನ್ನು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು 'ಎಕ್ಸ್' ವೇದಿಕೆಯಲ್ಲಿ ಹಂಚಿ ಕೊಂಡಿದ್ದಾರೆ.

'ನಿಮ್ಮ ಅಪಾರ ಅನುಭವ ಮತ್ತು ನೈತಿಕ ಬಲವು ಈ ಸಂಸ್ಥೆಯನ್ನು ಸಮೃದ್ಧಗೊಳಿಸಲಿದೆ. ಸಕಾರಾತ್ಮಕ ಬದಲಾವಣೆ ತಂದು ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಒಯ್ಯಲಿದೆ ಎನ್ನುವ ಭರವಸೆ ನನ್ನದು. ನಿಮಗೆ ಶುಭವಾಗಲಿ' ಎಂದು ಹಾರೈಸಿದ್ದಾರೆ.

'ಇಸ್ರೊ' ವಿಜ್ಞಾನಿ ನಂಬಿ ನಾರಾಯಣನ್ ಜೀವನಾಧಾರಿತ 'ರಾಕೆಟ್ರಿ: ದ ನಂಬಿ ಎಫೆಕ್ಟ್' ಸಿನಿಮಾದ ಮೂಲಕ ಮಾಧವನ್ ಚಿತ್ರ ನಿರ್ಮಾಪಕರಾಗಿದ್ದು, ಈ ಸಿನಿಮಾಕ್ಕೆ ರಾಷ್ಟ್ರಪ್ರಶಸ್ತಿ ದೊರೆತಿದೆ.




Officers Adda

- **ಮಾಧವನ್ ಎಫ್‌ಟಿಐಐ ಐ ಅಧ್ಯಕ್ಷ**

- ಪುಣೆಯ ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ಎಫ್ ಟಿ ಐ ಐ ಅಧ್ಯಕ್ಷರಾಗಿ ನಟ, ಚಿತ್ರ ನಿರ್ಮಾಪಕ ಆರ್ ಮಾಧವನ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

- ಇಸ್ರೋ ವಿಜ್ಞಾನಿ ನಂಬಿ ನಾರಾಯಣ್ ಜೀವನಾಧಾರಿತ ರಾಕೆಟ್‌ರಿ ದ ನಂಬಿ ಎಫೆಕ್ಟ್ ಸಿನಿಮಾದ ಮೂಲಕ ಮಾಧವನ್ ಚಿತ್ರ ನಿರ್ಮಾಪಕ ರಾಗಿದ್ದು ಈ ಸಿನಿಮಾಕ್ಕೆ ರಾಷ್ಟ್ರಪತಿ ಪ್ರಶಸ್ತಿ ದೊರೆತಿದೆ.

Officers Adda



# ಚಂದ್ರನ ಮೇಲೆ ವಿಕ್ರಮ್ ರೀಲ್ಯಾಂಡ್

**ಬೆಂಗಳೂರು:** ಚಂದ್ರಯಾನ-3 ಭಾಗವಾಗಿರುವ ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ಮೇಲ್ಮೈ ಮೇಲೆ 40 ಸೆಂಟಿಮೀಟರ್ ಮೇಲಕ್ಕೆ ಹಾರಿಸಿ, 40 ಸೆಂಟಿ ಮೀಟರ್ ಬದಿಗೆ ಜರುಗಿಸಿ, ಮತ್ತೊಮ್ಮೆ ಸಾಫ್ಟ್‌ಲ್ಯಾಂಡಿಂಗ್ ಮಾಡುವಲ್ಲಿ ಇಸ್ರೊ ಯಶಸ್ವಿಯಾಗಿದೆ.



ಈ ಮಧ್ಯೆ, 'ವಿಕ್ರಮ್' ಲ್ಯಾಂಡರ್ ನಿರೀಕ್ಷೆಗೂ ಮೀರಿ ತನ್ನ ಕೆಲಸಗಳನ್ನು ಅಚ್ಚುಕಟ್ಟಾಗಿ ಪೂರೈಸಿದ್ದು, ಸೋಮವಾರ ಅದನ್ನು 'ಸ್ಲೀಪ್ ಮೋಡ್'ಗೆ ಹಾಕಲಾಗಿದೆ. ಚಂದ್ರನ ಮೇಲೆ ರಾತ್ರಿಯಾಗುತ್ತಿರುವ ಹಿನ್ನೆಲೆಯಲ್ಲಿ ತೀವ್ರ ಉಷ್ಣಾಂಶ ಕುಸಿತದಿಂದ ಉಪಕರಣಗಳು ಹಾಳಾಗದಂತೆ ತಡೆಯಲು ಅವುಗಳನ್ನು ಸ್ವಿಚ್ ಆಫ್ ಮಾಡಲಾಗಿದೆ. ಸೆ.22ಕ್ಕೆ ವಿಕ್ರಮ್ ಲ್ಯಾಂಡರ್ ಮತ್ತು ರೋವರ್ ಅನ್ನು ಸ್ವಿಚ್ ಆನ್ ಮಾಡಲು ಇಸ್ರೊ ಯೋಜಿಸಿದೆ.

ವಿವರ»07




Officers Adda

- ಚಂದ್ರನ ಮೇಲೆ ವಿಕ್ರಂ ರಿಲ್ಯಾಂಡ್

- ಚಂದ್ರಯಾನ –3 ಭಾಗವಾಗಿರುವ ವಿಕ್ರಂ ಲ್ಯಾಂಡರ್ ಅನ್ನು ಚಂದ್ರನ ಮೇಲ್ಮೈ ಮೇಲೆ 40 ಸೆಂಟಿಮೀಟರ್ ಮೇಲಕ್ಕೆ ಹಾರಿಸಿ, 40 ಸೆಂಟಿಮೀಟರ್ ಬದಿಗೆ ಜರುಗಿಸಿ , ಮತ್ತೊಮ್ಮೆ ಸಾಫ್ಟ್ ಲ್ಯಾಂಡಿಂಗ್ ಮಾಡುವಲ್ಲಿ ಇಸ್ರೋ ಯಶಸ್ವಿಯಾಗಿದೆ.






# ಆಸಿಯಾನ್-ಇಂಡಿಯಾ ಶೃಂಗಕ್ಕೆ ಪ್ರಧಾನಿ ಮೋದಿ

**ಹೊಸದಿಲ್ಲಿ:** ಇಂಡೋನೇಷ್ಯಾದಲ್ಲಿ ನಡೆಯಲಿರುವ ಆಸಿಯಾನ್- ಇಂಡಿಯಾ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ.



ಸೆ.6 ಹಾಗೂ 7 ರಂದು ಜಕಾರ್ತದಲ್ಲಿ ನಡೆಯಲಿರುವ ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ (ಆಸಿಯಾನ್)ದ ಶೃಂಗದಲ್ಲಿ ಮೋದಿ ಪಾಲ್ಗೊಳ್ಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ.

ಜಿ20 ಶೃಂಗಸಭೆಗೂ ಎರಡು ದಿನ ಮೊದಲು ನಡೆಯಲಿರುವ ಆಸಿಯನ್ ಶೃಂಗಸಭೆಯಲ್ಲಿ ಏಷ್ಯಾದ ರಾಷ್ಟ್ರಗಳ ಮುಖ್ಯಸ್ಥರ ಜತೆ ಪ್ರಧಾನಿ ಮೋದಿ ಮಾತುಕತೆ ನಡೆಸಲಿದ್ದಾರೆ. ಏಷ್ಯಾ ರಾಷ್ಟ್ರಗಳ ನಡುವಿನ ಭಾರತದ ಸಂಬಂಧ ಬಲಗೊಳಿಸುವುದು, ಸಹಕಾರ ತತ್ವದಡಿ ಬಾಂಧವ್ಯ ವೃದ್ಧಿಗೊಳಿಸುವ ಕುರಿತು ಮಾತುಕತೆಗಳು ನಡೆಯಲಿವೆ.



- ಇಂಡೋನೇಷ್ಯಾದಲ್ಲಿ ನಡೆಯಲಿರುವ ಆಶಿಯನ್ ಇಂಡಿಯಾ ಶೃಂಗ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ.

- ಸೆ.6 ಹಾಗೂ 7 ರಂದು ಜಕಾರ್ತದಲ್ಲಿ ನಡೆಯಲಿರುವ ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ ದ ಶೃಂಗದಲ್ಲಿ ಮೋದಿ ಪಾಲ್ಗೊಳ್ಳಲಿದ್ದಾರೆ.

- ಏಷ್ಯಾ ರಾಷ್ಟ್ರಗಳ ನಡುವಿನ ಭಾರತದ ಸಂಬಂಧ ಬಲಗೊಳಿಸುವುದು , ಸಹಕಾರ ತತ್ವದಡಿ ಬಾಂಧವ್ಯ ವೃದ್ಧಿಗೊಳಿಸುವ ಕುರಿತು ಮಾತುಕತೆಗಳು ನಡೆಯಲಿವೆ.







Officers Adda

ASEAN Formal Summits

| No. | Date | Host country | Host cities | Host leader |
|---|---|---|---|---|
| 1st | 23–24 February 1976 | Indonesia | Bali | President Soeharto |
| 2nd | 4–5 August 1977 | Malaysia | Kuala Lumpur | Prime Minister Hussein Onn |
| 3rd | 14–15 December 1987 | Philippines | Manila | President Corazon Aquino |
| 4th | 27–29 January 1992 | Singapore | Singapore | Prime Minister Goh Chok Tong |
| 5th | 14–15 December 1995 | Thailand | Bangkok | Prime Minister Banharn Silpa-archa |

## ASEAN Summit




ASEAN member states shown in green

| | |
|---|---|
| **Status** | Active |
| **Genre** | Diplomatic conference |
| **Frequency** | Biannual |
| **Years active** | 56 |
| **Inaugurated** | 24 February 1967 |
| **Most recent** | 2023 |




Officers Adda

# ASSOCIATION OF SOUTHEAST ASIAN NATIONS







Officers Adda



# ಭಾರತೀಯ ಮೂಲದ ಧರ್ಮನ್ ಸಿಂಗಾಪುರ ಅಧ್ಯಕ್ಷ

**ಸಿಂಗಾಪುರ:** ಭಾರತೀಯ ಮೂಲದ ಧರ್ಮನ್ ಷಣ್ಮುಗರತ್ನಂ(66) ಅವರು ಸಿಂಗಾಪುರದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಚೀನಾ ಮೂಲದ ಇಬ್ಬರು ಅಭ್ಯರ್ಥಿಗಳನ್ನು ಹಿಂದಿಕ್ಕಿ ಶೇ.70.4ರಷ್ಟು ಮತಗಳನ್ನು ಪಡೆದು ಅವರು ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ.

ಸಿಂಗಾಪುರದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವವರು ಯಾವುದೇ ಪಕ್ಷಕ್ಕೆ ಸೇರಿರಬಾರದು ಎಂಬ ನಿಯಮವಿದೆ. ಈ ಕಾರಣಕ್ಕೆ ಪೀಪಲ್ಸ್ ಆ್ಯಕ್ಷನ್ ಪಾರ್ಟಿ (ಪಿಎಪಿ) ಹಾಗೂ ಸಚಿವ ಸ್ಥಾನಕ್ಕೆ ಧರ್ಮನ್ ರಾಜೀನಾಮೆ ನೀಡಿದ್ದರು. ಒಟ್ಟಾರೆ 27 ಲಕ್ಷ ಮತದಾರರು ಹಕ್ಕು ಚಲಾಯಿಸಿದ್ದರು. ಇವರಲ್ಲಿ ಶೇ.70ರಷ್ಟು ಮಂದಿ ಧರ್ಮನ್ ಷಣ್ಮುಗರತ್ನಂ ಅವರನ್ನೇ ಬೆಂಬಲಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಹಲಿಮಾಹ್ ಯಾಕೋಬ್ ಅವರು ಇದುವರೆಗೆ ಅಧ್ಯಕ್ಷೆಯಾಗಿದ್ದರು. ಇವರ ಅಧಿಕಾರಾವಧಿ ಸೆ. 13ಕ್ಕೆ ಕೊನೆಗೊಳ್ಳುತ್ತದೆ.

**ಮೋದಿ ಅಭಿನಂದನೆ:** ಧರ್ಮನ್ ಷಣ್ಮುಗಂ ಅವರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದನೆ ಸಲ್ಲಿಸಿದ್ದಾರೆ. ''ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಧರ್ಮನ್ ಷಣ್ಮುಗಂ ಅವರಿಗೆ ಅಭಿನಂದನೆಗಳು. ಮುಂದಿನ ದಿನಗಳಲ್ಲಿ ಭಾರತ ಹಾಗೂ ಸಿಂಗಾಪುರ ನಡುವಿನ ವ್ಯೂಹಾತ್ಮಕ ಸಂಬಂಧಗಳ ಏಳಿಗೆಗೆ ಎದುರು ನೋಡುತ್ತಿದ್ದೇವೆ,'' ಎಂದು ಟ್ವೀಟ್ ಮಾಡಿದ್ದಾರೆ.

ತಮಿಳುನಾಡು ಮೂಲದ ಧರ್ಮನ್ ಷಣ್ಮುಗಂ ಅವರು ಸಿಂಗಾಪುರದಲ್ಲಿ 1957ರ ಫೆಬ್ರವರಿ 25ರಂದು ಜನಿಸಿದರು. ಇವರ ತಂದೆ ಪ್ರೊಫೆಸರ್ ಕೆ. ಷಣ್ಮುಗ ರತ್ನಂ ಸಿಂಗಾಪುರದಲ್ಲಿ ಕ್ಯಾನ್ಸರ್ ಸಂಶೋಧನಾ ಕೇಂದ್ರ ಸ್ಥಾಪಿಸಿದ್ದರು.




Officers Adda

- ಧರ್ಮನ್ ಸಿಂಗಾಪುರ ಅಧ್ಯಕ್ಷ

- ಭಾರತೀಯ ಧರ್ಮನ್ ಷಣ್ಮುಗರತ್ನಂ ಸಿಂಗಾಪುರದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.


- ಚೀನಾ ಮೂಲದ ಇಬ್ಬರು ಅಭ್ಯರ್ಥಿಗಳನ್ನು ಹಿಂದಿಕ್ಕಿ ಶೇಕಡಾ 70 .4 ರಷ್ಟು ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ.

- ತಮಿಳುನಾಡು ಮೂಲದ ಧರ್ಮನ್ ಷಣ್ಮುಗಂ ಅವರು ಸಿಂಗಾಪುರದಲ್ಲಿ 1957 ರ ಫೆಬ್ರುವರಿ 25 ರಂದು ಜನಿಸಿದರು. ಇವರ ತಂದೆ ಪ್ರೊಫೆಸರ್ ಕೆ ಷಣ್ಮುಗ ರತ್ನಂ ಸಿಂಗಾಪುರದಲ್ಲಿ ಕ್ಯಾನ್ಸರ್ ಸಂಶೋಧನಾ ಕೇಂದ್ರ ಸ್ಥಾಪಿಸಿದ್ದರು.

Officers Adda



# 2080ರ ವೇಳೆಗೆ ಅಂತರ್ಜಲ ಮಟ್ಟ ಮೂರು ಪಟ್ಟು ಕುಸಿತ?



ನವದೆಹಲಿ (ಪಿಟಿಐ): ಅಂತರ್ಜಲ ಬಳಕೆಗೆ ಸಂಬಂಧಿಸಿದಂತೆ ಭಾರತದ ರೈತರ ಧೋರಣೆಯು ಇದೇ ರೀತಿ ಮುಂದುವರಿದರೆ 2080ರ ವೇಳೆಗೆ ದೇಶದಲ್ಲಿ ಸದ್ಯದ ಸ್ಥಿತಿಗಿಂತಲೂ ಅಂತರ್ಜಲ ಮಟ್ಟವು ಮೂರು ಪಟ್ಟು ಕುಸಿಯಲಿದೆ. ಇದು ಆಹಾರ ಹಾಗೂ ನೀರಿನ ಅಭಾವ ಸೃಷ್ಟಿಗೂ ಕಾರಣವಾಗಲಿದೆ ಎಂದು ಹೊಸ ಅಧ್ಯಯನವೊಂದು ಹೇಳಿದೆ.

ತಾಪಮಾನ ಹೆಚ್ಚಳದಿಂದ ನೀರಾವರಿ ಉದ್ದೇಶಕ್ಕಾಗಿ ರೈತರು ಅತಿಯಾಗಿ ಅಂತರ್ಜಲವನ್ನು ಬಳಕೆ ಮಾಡುತ್ತಿದ್ದಾರೆ ಎಂದು 'ಸೈನ್ಸ್ ಅಡ್ವಾನ್ಸ್' ಜರ್ನಲ್‌ನಲ್ಲಿ ಪ್ರಕಟವಾಗಿರುವ ಅಮೆರಿಕದ ಮಿಚಿಗನ್ ವಿಶ್ವವಿದ್ಯಾಲಯದ ವರದಿಯಲ್ಲಿ ಹೇಳಲಾಗಿದೆ.

ನೀರಿನ ಕೊರತೆಯು ಜನರ ಜೀವನೋಪಾಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಭವಿಷ್ಯದಲ್ಲಿ ದೇಶದ ಒಟ್ಟು ಜನಸಂಖ್ಯೆಯ ಮೂರನೇ ಒಂದರಷ್ಟು ನಿವಾಸಿಗಳು ತೊಂದರೆಗೆ ಸಿಲುಕಲಿದ್ದಾರೆ. ಅಲ್ಲದೇ, ಇದರ ಪರಿಣಾಮವು ಜಾಗತಿಕವಾಗಿಯೂ ತಟ್ಟಲಿದೆ ಎಂದು ವಿವರಿಸಿದೆ.

'ಭಾರತವು ವಿಶ್ವದಲ್ಲಿಯೇ ಅತಿದೊಡ್ಡ ಅಂತರ್ಜಲ ಬಳಕೆದಾರ ದೇಶವಾಗಿದೆ. ಪ್ರಾದೇಶಿಕ ಹಾಗೂ ಜಾಗತಿಕ ಆಹಾರ ಪೂರೈಕೆಗೆ ಅಂತರ್ಜಲವು ಬಹುಮುಖ್ಯ ಸಂಪನ್ಮೂಲವಾಗಿದೆ' ಎಂದು ಹಿರಿಯ ಲೇಖಕ ಮೇಹಾ ಜೈನ್ ಹೇಳಿದ್ದಾರೆ.

ನೀರಿನ ಬಳಕೆಯಲ್ಲಿನ ಬದಲಾವಣೆ, ಅಂತರ್ಜಲ ಮಟ್ಟ, ಹವಾಮಾನ ಸೇರಿದಂತೆ ಭವಿಷ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಫಸಲು ಬೆಳೆಯಲು ಅಗತ್ಯವಿರುವ ನೀರಿನ ಲಭ್ಯತೆ ಕುರಿತು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

'ನಾವು ಸಂಶೋಧನೆಯ ಅಂದಾಜಿಗೆ ಬಳಸಿರುವ ಮಾದರಿಗಳ ಅನ್ವಯ ತಾಪಮಾನ ಹೆಚ್ಚಳದಿಂದ ಭವಿಷ್ಯದಲ್ಲಿ ಅಂತರ್ಜಲ ಮಟ್ಟ ಕುಸಿತವಾಗಲಿದೆ. ಅದರಲ್ಲೂ ದಕ್ಷಿಣ ಮತ್ತು ಮಧ್ಯ ಭಾರತದಲ್ಲಿ ಹೆಚ್ಚಿನ ಸಮಸ್ಯೆ ಸೃಷ್ಟಿಯಾಗಲಿದೆ' ಎಂದು ಮುಖ್ಯ ಲೇಖಕ ನಿಶಾನ್ ಭಟ್ಟರೈ ಹೇಳಿದ್ದಾರೆ.

ಭಾರತದಲ್ಲಿ ಮುಂದಿನ ದಶಕಗಳಲ್ಲಿ ಹವಾಮಾನ ವೈಪರೀತ್ಯವೂ ಹೆಚ್ಚಲಿದೆ. ಉಷ್ಣಾಂಶ ಹೆಚ್ಚಳವಾಗಲಿದೆ. ಜೂನ್‌ನಿಂದ ಸೆಪ್ಟೆಂಬರ್ ನಡುವೆ ಮುಂಗಾರು ಮಳೆ ಹೆಚ್ಚು ಸುರಿಸಿದರೆ, ಹಿಂಗಾರು ಅವಧಿಯಲ್ಲಿ ಮಳೆ ಕಡಿಮೆಯಾಗಲಿದೆ ಎಂದು ಸಂಶೋಧಕರು ಹೇಳಿದ್ದಾರೆ.




Officers Adda

- ಅಂತರ್ಜಲ

- ಅಂತರ್ಜಲ ಬಳಕೆಗೆ ಸಂಬಂಧಿಸಿದಂತೆ ಭಾರತದ ರೈತರ ಧೋರಣೆಯು ಇದೇ ರೀತಿ ಮುಂದುವರಿದರೆ 2080ರ ವೇಳೆಗೆ ದೇಶದಲ್ಲಿ ಸದ್ಯದ ಸ್ಥಿತಿಗಿಂತಲೂ ಅಂತರ್ಜಲ ಮಟ್ಟವು ಮೂರು ಪಟ್ಟು ಕುಸಿಯಲಿದೆ. ಇದು ಆಹಾರ ಹಾಗೂ ನೀರಿನ ಅಭಾವ ಸೃಷ್ಟಿಗೂ ಕಾರಣವಾಗಲಿದೆ ಎಂದು ಹೊಸ ಅಧ್ಯಯನ ಒಂದು ಹೇಳಿದೆ.

- ಸೈನ್ಸ್ ಅಡ್ವಾನ್ಸ್ ಜರ್ನಲ್ ನಲ್ಲಿ ಪ್ರಕಟವಾಗಿರುವ ಅಮೆರಿಕಾದ ಮಿಚಿಗನ್ ವಿಶ್ವವಿದ್ಯಾಲಯದ ವರದಿಯಲ್ಲಿ ಹೇಳಲಾಗಿದೆ.

- ಭಾರತವು ವಿಶ್ವದಲ್ಲಿಯೇ ಅತಿ ದೊಡ್ಡ ಅಂತರ್ಜಲ ಬಳಕೆದಾರ ದೇಶವಾಗಿದೆ. ಪ್ರಾದೇಶಿಕ ಹಾಗೂ ಜಾಗತಿಕ ಆಹಾರ ಪೂರೈಕೆಗೆ ಅಂತರ್ಜಲವು ಬಹುಮುಖ್ಯವಾಗಿದೆ .

- ಭಾರತದಲ್ಲಿ ಮುಂದಿನ ದಶಕದಲ್ಲಿ ಹವಾಮಾನ ವೈಪರಿತ್ಯವು ಹೆಚ್ಚಲಿದೆ. ಉಷ್ಣಾಂಶ ಹೆಚ್ಚಳವಾಗಲಿದೆ .

Officers Adda



# 'ಸತಾನ್‌-2' ಖಂಡಾಂತರ ಕ್ಷಿಪಣಿ ರಷ್ಯಾ ಯುದ್ಧಪಡೆಗೆ ಸೇರ್ಪಡೆ

ಮಾಸ್ಕೊ: ಅತ್ಯಂತ ವಿನಾಶಕಾರಿ, ಅಣ್ವಸ್ತ್ರ ಸಾಮರ್ಥ್ಯದ 'ಸತಾನ್ -2' ಖಂಡಾಂತರ ಕ್ಷಿಪಣಿಯನ್ನು ಇದೇ ಮೊದಲ ಬಾರಿಗೆ ಯುದ್ಧಪಡೆಗೆ ಸೇರ್ಪಡೆ ಮಾಡಿರುವುದಾಗಿ ರಷ್ಯಾ ಶುಕ್ರವಾರ ಘೋಷಿಸಿದೆ.

ಪಾಶ್ಚಿಮಾತ್ಯ ಮಾಧ್ಯಮಗಳುಸಾಮಾನ್ಯವಾಗಿ 'ಸತಾನ್ -2' ಎಂದೇ ಕರೆಯುವ ರಷ್ಯಾದ ಆರ್‌ಎಸ್‌-28 ಸರ್ಮಾಟ್ ಖಂಡಾಂತರ ಕ್ಷಿಪಣಿಯನ್ನು, ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಇದು 'ಅಜೇಯ' ಅಸ್ತ್ರವೆಂದು ಒಮ್ಮೆ ಬಣ್ಣಿಸಿದ್ದರು. ಈ ಕ್ಷಿಪಣಿಯನ್ನು ಪುಟಿನ್ 2018ರಲ್ಲಿ ಅನಾವರಣಗೊಳಿಸಿದ್ದರು.

ಉಕ್ರೇನ್ ಮೇಲೆ ಒಂದೂವರೆ ವರ್ಷದಿಂದ ಅಕ್ರಮಣ ನಡೆಸುತ್ತಿರುವ ರಷ್ಯಾ ಇದೇ ಮೊದಲ ಬಾರಿಗೆ ಯುದ್ಧ ಕರ್ತವ್ಯಕ್ಕೆ ನಿಯೋಜಿಸಿರುವುದಾಗಿ ದೇಶದ ಬಾಹ್ಯಾಕಾಶ ಸಂಸ್ಥೆ ರೋಸ್ಕೊಸ್‌ಮಾಸ್ ಶುಕ್ರವಾರ ಅಧಿಕೃತ ಘೋಷಣೆ ಮಾಡಿದೆ.

'ಸರ್ಮಾಟ್' ಕಾರ್ಯತಂತ್ರದ ಕ್ಷಿಪಣಿ ವ್ಯವಸ್ಥೆಯು ಸಕ್ರಿಯ ಕರ್ತವ್ಯಕ್ಕೆ ಪ್ರವೇಶಿಸಿದೆ ಎಂದು ರೋಸ್ಕೊಸ್‌ಮಾಸ್ ಮುಖ್ಯಸ್ಥ ಯುರಿ ಬೊರಿಸೊವ್ ತಿಳಿಸಿದ್ದಾರೆ.

'ಆರ್‌ಎಸ್‌-28 ಸರ್ಮಾಟ್' ದೇಶದ ಮುಂದಿನ ಪೀಳಿಗೆಯ ಖಂಡಾಂತರ ಕ್ಷಿಪಣಿಯಾಗಿದ್ದು, ವಿಶ್ವದಲ್ಲಿ ಇದೊಂದು ಅತ್ಯಂತ ಶಕ್ತಿಶಾಲಿ ಮತ್ತು ವಿನಾಶಕಾರಿ ಅಣ್ವಸ್ತ್ರ ಕ್ಷಿಪಣಿ ಆಗಿದೆ ಎಂದು 'ಸ್ಪುಟ್ನಿಕ್ ನ್ಯೂಸ್' ವರದಿ ಮಾಡಿದೆ.

**ಕ್ಷಿಪಣಿ ವಿಶೇಷತೆ:** 'ಸರ್ಮಾಟ್' ಕ್ಷಿಪಣಿ ವ್ಯವಸ್ಥೆಯು ಕಿಂಜಾಲ್ ಮತ್ತು ಅವನ್‌ಗಾರ್ಡ್ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ಒಳಗೊಂಡಿದೆ. 200 ಟನ್‌ಗೂ ಅಧಿಕ ಮತ್ತು ಬಹು ಸಿಡಿತಲೆಗಳನ್ನು ಈ ಕ್ಷಿಪಣಿ ಸಾಗಿಸಲಿದೆ. ಇದನ್ನು ಕ್ಷಿಪಣಿ ನಿಗ್ರಹ ರಕ್ಷಣಾ ವ್ಯವಸ್ಥೆಗಳಿಂದ ತಪ್ಪಿಸಿಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಶತ್ರುಪಡೆಗಳ ಕಣ್ಗಾವಲು ವ್ಯವಸ್ಥೆಯನ್ನು ಪತ್ತೆ ಹಚ್ಚಿ ಅದನ್ನು ನಿಗ್ರಹಿಸಿಕೊಂಡು ಗುರಿಮುಟ್ಟುವಂತೆ ರೂಪಿಸಲಾಗಿದೆ ಎಂದು 'ಮಾಸ್ಕೊ ಟೈಮ್ಸ್' ವರದಿ ಮಾಡಿದೆ.




Officers Adda

- ಸತಾನ್ –2 ಖಂಡಾಂತರ ಕ್ಷಿಪಣಿ ರಷ್ಯಾ ಯುದ್ಧ ಪಡೆಗೆ ಸೇರ್ಪಡೆ

- ಅತ್ಯಂತ ವಿನಾಶಕಾರಿ ಅಣ್ವಸ್ತ್ರಗಳು ಸಾಮರ್ಥ್ಯದ ಸತಾನ್ –2 ಖಂಡಾಂತರ ಕ್ಷಿಪಣಿಯನ್ನು ಇದೇ ಮೊದಲ ಬಾರಿಗೆ ಯುದ್ಧ ಪಡೆಗೆ ಸೇರ್ಪಡೆ ಮಾಡಿರುವುದಾಗಿ ರಷ್ಯಾ ಘೋಷಿಸಿದೆ.

- ಪಶ್ಚಿಮಾತ್ಯ ಮಾಧ್ಯಮಗಳು ಸಾಮಾನ್ಯವಾಗಿ ಸತಾನ್ –2 ಎಂದೇ ಕರೆಯುವ ರಷ್ಯಾದ ಆರ್ ಎಸ್ –28.

- ಈ ಕ್ಷಿಪಣಿಯನ್ನು ಪುಟಿನ್ 2018ರಲ್ಲಿ ಅನಾವರಣಗೊಳಿಸಿದ್ದರು.

- ಆರ್ ಎಸ್ 28 ಸರ್ಮಾ ಟ್ ದೇಶದ ಮುಂದಿನ ಪೀಳಿಗೆಯ ಖಂಡಾಂತರ ಕ್ಷಿಪಣಿಯಾಗಿದ್ದು , ವಿಶ್ವದಲ್ಲಿ ಇದೊಂದು ಅತ್ಯಂತ ಶಕ್ತಿಶಾಲಿ ಮತ್ತು ವಿನಾಶಕಾರಿ ಅಣ್ವಸ್ತ್ರ ಕ್ಷಿಪಣಿ ಆಗಿದೆ ಎಂದು ಸ್ಪುಟ್ನಿಕ್ ನ್ಯೂಸ್ ವರದಿ ಮಾಡಿದೆ.

Officers Adda





ಅಂತರಿಕ್ಷದಲ್ಲಿ ಹೊರಹೊಮ್ಮುವ ಶಕ್ತಿಶಾಲಿ ಎಕ್ಸ್‌–ರೇ ಮೂಲಗಳ ಅಧ್ಯಯನ

# ಖಗೋಳ ಅಧ್ಯಯನ: 'ಎಕ್ಸ್‌ಪೊಸ್ಯಾಟ್' ಸಜ್ಜು

ಚಂದ್ರಯಾನ–3ರ ರೋವರ್ 'ಪ್ರಜ್ಞಾನ್' ಚಂದಿರನ ಅಂಗಳದಲ್ಲಿ 100 ಮೀಟರ್‌ವರೆಗೂ ಕ್ರಮಿಸಿರುವ ಚಿತ್ರವನ್ನು ಇಸ್ರೊ ಬಿಡುಗಡೆ ಮಾಡಿದೆ –ಪಿಟಿಐ ಚಿತ್ರ

ಬೆಂಗಳೂರು (ಪಿಟಿಐ): ಚಂದ್ರಯಾನ 3 ಮತ್ತು 'ಆದಿತ್ಯ ಎಲ್1' ಯಶಸ್ವಿನ ಬಳಿಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ಇಸ್ರೊ) ಈಗ ಖಗೋಳದ ಕೌತುಕಗಳ ಅಧ್ಯಯನದ ಕಾರ್ಯಯೋಜನೆಗೆ ಸಜ್ಜಾಗಿದೆ.

ಪ್ರತಿಕೂಲ ಸಂದರ್ಭದಲ್ಲೂ ಖಗೋಳದಲ್ಲಿ ಹೊರಹೊಮ್ಮುವ ಶಕ್ತಿಶಾಲಿ ಎಕ್ಸ್‌-ರೇ ಮೂಲಗಳ ವಿವಿಧ ಆಯಾಮಗಳ ಅಧ್ಯಯನದ ಎಕ್ಸ್‌ಪೊಸ್ಯಾಟ್ (ಎಕ್ಸ್‌-ರೇ ಪೊಲಾರಿಮೀಟರ್ ಸ್ಯಾಟಲೈಟ್) ಉಡಾವಣೆಗೆ ಇಸ್ರೊ ಸಿದ್ಧತೆ ನಡೆಸಿದೆ.

ಭೂಮಿಯ ಕೆಳಮಟ್ಟದ ಕಕ್ಷೆಯಲ್ಲಿ ಪರಿಭ್ರಮಿಸಲಿರುವ ಈ ಉಪಗ್ರಹವು ಎರಡು ವೈಜ್ಞಾನಿಕ ಉಪಕರಣಗಳನ್ನು ಒಳಗೊಂಡಿರಲಿದೆ. ಪಾಲಿಕ್ಸ್ (ಪೊಲ್ಯಾರಿಮೀಟರ್ ಇನ್‌ಸ್ಟ್ರುಮೆಂಟ್ ಇನ್ ಎಕ್ಸ್‌ ರೇ) ಧ್ರುವಗಳ ಕೋನದ ಮಾನದಂಡಗಳ ಅಧ್ಯಯನ ಮಾಡಿದರೆ, ಎಕ್ಸ್‌ಪೆಕ್ಟ್ (ಎಕ್ಸ್‌ ರೇ ಸ್ಪೆಕ್ಟ್ರೊಸ್ಕೋಪಿ) ಉಪಕರಣ ಶಕ್ತಿಯ ವ್ಯಾಪ್ತಿಯನ್ನು ಅಂದಾಜಿಸಿ ಮಾಹಿತಿಯನ್ನು ರವಾನಿಸಲಿದೆ ಎಂದು ಇಸ್ರೊ ತಿಳಿಸಿದೆ.

'ಎಕ್ಸ್‌ಪೊಸ್ಯಾಟ್ ಉಡಾವಣೆಗೆ ಸಿದ್ಧವಾಗಿದೆ' ಎಂದು ಇಸ್ರೊ ಅಧಿಕಾರಿಯೊಬ್ಬರು ತಿಳಿಸಿದರು. ಆದರೆ, ಉಡಾವಣೆ ಸಮಯ ಸೇರಿದಂತೆ ಹೆಚ್ಚಿನ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

## ಆದಿತ್ಯ ಎಲ್–1 ಆಗಸದತ್ತ ನೆಗೆತ

ಒಂದನೇ ಪುಟದಿಂದ...

ಪ್ರಯಾಣಕ್ಕೆ ಒಟ್ಟು 125 ದಿನ ಬೇಕಾಗಲಿದೆ ಎಂದು ಇಸ್ರೊ ತಿಳಿಸಿದೆ.

ಆದಿತ್ಯ ಎಲ್1, ಸೂರ್ಯನ ಚಿತ್ರಗಳನ್ನು ತೆಗೆದು ವೈಜ್ಞಾನಿಕ ಪ್ರಯೋಗಗಳಿಗಾಗಿ ಕಳುಹಿಸಿಕೊಡಲಿದೆ.

ಸೂರ್ಯ ಮತ್ತು ಭೂಮಿಯ ನಡುವೆ ಐದು ಲಗ್ರಾಂಜಿಯನ್ ಬಿಂದುಗಳು ಇವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಈ ಬಿಂದುಗಳನ್ನು ನಿಲುಗಡೆ ತಾಣಗಳು ಎಂದೂ ಕರೆಯಬಹುದು. ಇಲ್ಲಿ ಸಣ್ಣ ಉಪಕರಣವೊಂದನ್ನು ಇರಿಸಿದರೆ ಅದು ಅಲ್ಲಿಯೇ ನೆಲೆಯಾಗಿ ಬಿಡುತ್ತದೆ. ಇಟಲಿ ಫ್ರಾನ್ಸ್‌ನ ವಿಜ್ಞಾನಿ ಜೋಸೆಫ್ ಲೂಯಿಸ್ ಲಗ್ರಾಂಜ್ ಎಂಬ ಗಣಿತಶಾಸ್ತ್ರಜ್ಞನ ಸ್ಮರಣೆಗಾಗಿ ಈ ಬಿಂದುಗಳಿಗೆ ಅವರ ಹೆಸರು ಇರಿಸಲಾಗಿದೆ. ಲಗ್ರಾಂಜಿಯನ್ ಬಿಂದುವಿನಲ್ಲಿ ವೀಕ್ಷಣಾಲಯವು ಅತ್ಯಂತ ಕಡಿಮೆ ಇಂಧನದಲ್ಲಿ ಕಾರ್ಯಾಚರಣೆ ನಡೆಸಬಲ್ಲುದು.

ಭೂಮಿಯ ವಾತಾವರಣ ಮತ್ತು ಅದರ ಆಯಸ್ಕಾಂತೀಯ ಕ್ಷೇತ್ರವು ಸೂರ್ಯನ ಹಾನಿಕಾರಕ ವಿಕಿರಣಗಳನ್ನು ತಡೆದು ರಕ್ಷಾ ಕವಚದಂತೆ ಕೆಲಸ ಮಾಡುತ್ತದೆ. ಇಂತಹ ವಿಕಿರಣಗಳ ಪತ್ತೆಗಾಗಿ ಬಾಹ್ಯಾಕಾಶದಿಂದ ಸೂರ್ಯನ ಅಧ್ಯಯನ ನಡೆಸಲಾಗುತ್ತಿದೆ. ಸೂರ್ಯನ ಕಿರೀಟ ಭಾಗದ ತಾಪ, ಸೌರ ಮಾರುತದ ವೇಗವರ್ಧನೆ, ಸೌರ ಜ್ವಾಲೆ, ಬಾಹ್ಯಾಕಾಶದಲ್ಲಿ ಭೂಮಿಯ ಅತಿ ಸಮೀಪದ ವಾತಾವರಣ ಇತ್ಯಾದಿ ಅಧ್ಯಯನವು ಈ ಯೋಜನೆಯ ಗುರಿಯಾಗಿದೆ.

'ಆದಿತ್ಯ ಎಲ್1' ಯಶಸ್ವಿ ಉಡ್ಡಯನಕ್ಕಾಗಿ ವಿಜ್ಞಾನಿಗಳಿಗೆ ಅಭಿನಂದನೆಗಳು. ಖಗೋಳವನ್ನು ಇನ್ನಷ್ಟು ವಿಸ್ತೃತವಾಗಿ ಅರ್ಥಮಾಡಿಕೊಳ್ಳಲು ಹಾಗೂ ಇಡೀ ಮನುಕುಲದ ಅಭಿವೃದ್ಧಿಗಾಗಿ ವಿಜ್ಞಾನ ಕ್ಷೇತ್ರದಲ್ಲಿ ನಮ್ಮ ಅವಿರತ ಪ್ರಯತ್ನ ಮುಂದುವರಿಯಲಿದೆ
**ನರೇಂದ್ರ ಮೋದಿ,** ಪ್ರಧಾನಿ

ಆದಿತ್ಯ ಎಲ್1 ಯಶಸ್ವಿ ಉಡ್ಡಯನವು ಭಾರತ ಮತ್ತು ಇಸ್ರೊದ ದೃಷ್ಟಿಯಿಂದ ಮತ್ತೊಂದು ಅದ್ವಿತೀಯ ಸಾಧನೆ. ಇಸ್ರೊಗೆ ಅಭಿನಂದಿಸುವ ಜೊತೆಗೆ ಅದರ ಯಶಸ್ಸಿನ ಪಯಣವನ್ನೂ ಮೆಲುಕು ಹಾಕುವುದು ಸ್ತುತ್ಯರ್ಹ
**ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



- ಎಕ್ಸ್ ಪೋಸ್ಯಾಟ್


- ಖಗೋಳದಲ್ಲಿ ಹೊರಹೊಮ್ಮುವ ಶಕ್ತಿಶಾಲಿ ಎಕ್ಸ ರೇ ಮೂಲಗಳ ವಿವಿಧ ಆಯಾಮಗಳ ಅಧ್ಯಯನದ (ಎಕ್ಸ್ ಪೊ ಸ್ಯಾ ಟ್) ಎಕ್ಸ್ ರೇ ಪೋಲಾರಿ ಮೀಟರ್ ಸೆಟಲೈಟ್ ಉಡಾವಣೆಗೆ ಇಸ್ರೋ ಸಿದ್ದತೆ ನಡೆಸಿದೆ.

- ಭೂಮಿಯ ಕೆಳಮಟ್ಟದ ಕಕ್ಷೆಯಲ್ಲಿ ಪರಿಭ್ರಮಿಸಲಿರುವ ಈ ಉಪಗ್ರಹವು 2 ವೈಜ್ಞಾನಿಕ ಉಪಕರಣಗಳನ್ನು ಒಳಗೊಂಡಿರಲಿದೆ.

Officers Adda



# X-ray Polarimeter Satellite



Space vehicle

The X-ray Polarimeter Satellite is a ISRO planned space observatory to study polarisation of cosmic X-rays. It is planned to be launched in 2023 or later on a Polar Satellite Launch Vehicle, with mission life of at least five years. Wikipedia

**Launch date:** Q2 2023 (planned)

**Dimensions:** 65 × 65 × 60 cm (26 × 26 × 24 in)

**Launch mass:** 480 kg (1,060 lb)

**Operator:** ISRO

**Power:** 1260 watts

**Rocket:** PSLV

**Spacecraft:** X-ray Polarimeter Satellite

Feedback




Officers Adda



# ದಾಖಲೆಯ ಅಡುಗೆ ಎಣ್ಣೆ ಆಮದು

**ಹೊಸದಿಲ್ಲಿ:** ದೇಶದ ಅಡುಗೆ ಎಣ್ಣೆ ಆಮದು ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. ಅಗಸ್ಟ್ ತಿಂಗಳಲ್ಲಿ ಆಮದು ಪ್ರಮಾಣ ಶೇ.5ರಷ್ಟು, ಅಂದರೆ ದಾಖಲೆಯ 10.85 ಲಕ್ಷ ಮೆಟ್ರಿಕ್ ಟನ್‌ನಷ್ಟು ಏರಿಕೆಯಾಗಿದೆ. ಜುಲೈ ತಿಂಗಳಲ್ಲಿ ಭಾರತ 10.78 ಮೆಟ್ರಿಕ್ ಟನ್ ಗಳಷ್ಟು ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಂಡಿತ್ತು.

ಆಮದು ಹೆಚ್ಚಳಕ್ಕೆ ಮುಂಬರಲಿರುವ ಹಬ್ಬಗಳ ಸಾಲು ಕಾರಣ ಎನ್ನಲಾಗಿದೆ. ಹಬ್ಬಗಳ ಸಂದರ್ಭದಲ್ಲಿ ಜನರು ಅತಿ ಹೆಚ್ಚು ಅಡುಗೆ ಎಣ್ಣೆಯನ್ನು ಬಳಸುವುದರಿಂದ ವ್ಯಾಪಾರಿಗಳು ಮುಂಚಿತವಾಗಿ ಅಡುಗೆ ಎಣ್ಣೆ ಆಮದು ಮಾಡಿಕೊಂಡು ದಾಸ್ತಾನು ಇರಿಸುತ್ತಿದ್ದಾರೆ. ಭಾರತಕ್ಕೆ ಬಹುಪಾಲು ತಾಳೆ ಎಣ್ಣೆಯು ಇಂಡೋನೇಷ್ಯಾ, ಮಲೇಷ್ಯ ಮತ್ತು ಥಾಯ್ಲೆಂಡಿನಿಂದ ಬರುತ್ತದೆ. ಅರ್ಜೆಂಟೀನಾ, ಬ್ರೆಜಿಲ್, ರಷ್ಯಾ ಮತ್ತು ಉಕ್ರೇನ್ ದೇಶಗಳಿಂದ ಬಹುಪಾಲು ಸೋಯಾ ಎಣ್ಣೆ ದೇಶಕ್ಕೆ ರಫ್ತಾಗುತ್ತದೆ.

ದೇಶದಲ್ಲಿ ಈ ಬಾರಿ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಸೋಯಾಬೀನ್, ಕಡಲೆಬೀಜ ಉತ್ಪಾದನೆ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಅಡುಗೆ ಎಣ್ಣೆ ದಾಖಲೆ ಪ್ರಮಾಣದಲ್ಲಿ ಆಮದಾಗಲು ಇದೂ ಒಂದು ಪ್ರಮುಖ ಕಾರಣ.



- ದಾಖಲೆಯ ಅಡುಗೆ ಎಣ್ಣೆ ಆಮದು

- ದೇಶದ ಅಡುಗೆ ಎಣ್ಣೆ ಆಮದು ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡು ಬಂದಿದೆ. ಆಗಸ್ಟ್ ತಿಂಗಳಲ್ಲಿ ಆಮದು ಪ್ರಮಾಣ ಶೇಕಡ ಐದರಷ್ಟು ಅಂದರೆ ದಾಖಲೆಯ 10.85 ಲಕ್ಷ ಮೆಟ್ರಿಕ್ ಟನ್ ನಷ್ಟು ಏರಿಕೆಯಾಗಿದೆ. ಜುಲಾಯಿ ತಿಂಗಳಲ್ಲಿ ಭಾರತ 10.78 ಮೆಟ್ರಿಕ್ ಟನ್ ಗಳಷ್ಟು ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಂಡಿತ್ತು.

- ಭಾರತಕ್ಕೆ ಬಹು ಪಾಲು ತಾಳೆ ಎಣ್ಣೆಯು ಇಂಡೋನೇಶ, ಮಲೇಶಿಯಾ ಮತ್ತು ಥೈಲ್ಯಾಂಡಿನಿಂದ ಬರುತ್ತದೆ. ಅರ್ಜೆಂಟೀನಾ ,ಬ್ರೆಜಿಲ್ ,ರಷ್ಯಾ ಮತ್ತು ಉಕ್ರೇನ್ ದೇಶಗಳಿಂದ ಬಹುಪಾಲು ಸೋಯಾ ಎಣ್ಣೆ ದೇಶಕ್ಕೆ ರಫ್ತಾಗುತ್ತದೆ.

- ದೇಶದಲ್ಲಿ ಈ ಬಾರಿ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಸೋಯಾಬೀನ್, ಕಡಲೆ ಬೀಜ ಉತ್ಪಾದನೆ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಅಡುಗೆ ಎಣ್ಣೆ ದಾಖಲೆ ಪ್ರಮಾಣದಲ್ಲಿ ಆಮದಾಗಲು ಇದು ಒಂದು ಪ್ರಮುಖ ಕಾರಣ.

Officers Adda



# ಸಂಸತ್ತಿನ ವಿಶೇಷ ಅಧಿವೇಶನ

# ಗೋಪ್ಯತೆಯು ಅಗೌರವಕ್ಕೆ ಸಮ

ಕೇಂದ್ರ ಸರ್ಕಾರವು ಈ ತಿಂಗಳ 18ರಿಂದ 22ರವರೆಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ಆಶ್ಚರ್ಯ ಮೂಡಿಸುವಂಥದ್ದು. ಅಲ್ಲದೆ, ವಿಶೇಷ ಅಧಿವೇಶನವನ್ನು ಕರೆದಿರುವ ಕಾರಣ ಏನಿರಬಹುದು ಎಂಬ ಬಗ್ಗೆ ಹಲವು ಪ್ರಶ್ನೆಗಳನ್ನು ಮೂಡಿಸುವಂತಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ತೀರ್ಮಾನಗಳನ್ನು ಹಠಾತ್ತನೆ ತೆಗೆದುಕೊಳ್ಳುವುದು, ಜನ ಸಮೂಹದಲ್ಲಿ ತೀವ್ರ ಆಸಕ್ತಿ ಕೆರಳುವಂತೆ ಮಾಡುವುದು ಬಹಳ ಇಷ್ಟವೆಂಬಂತೆ ಕಾಣುತ್ತದೆ. ಗರಿಷ್ಠ ಮುಖಬೆಲೆಯ ನೋಟುಗಳನ್ನು ಹಠಾತ್ತನೆ ರದ್ದು ಮಾಡಿದ ಕ್ರಮ, ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಠಾತ್ತನೆ ಹಿಂದಕ್ಕೆ ಪಡೆದಿದ್ದು ಈ ಮಾತಿಗೆ ನಿದರ್ಶನ. ಆದರೆ ಗೋಪ್ಯವಾಗಿ ತೀರ್ಮಾನಗಳನ್ನು ಕೈಗೊಳ್ಳುವುದು ಅಥವಾ ಅನಿರೀಕ್ಷಿತವಾಗಿ ನಿರ್ಧಾರ ಕೈಗೊಳ್ಳುವುದು ಪ್ರಜಾತಂತ್ರ ವ್ಯವಸ್ಥೆಯ ಪಾಲಿಗೆ ಸಹಜವೆಂಬಂತೆ ಆಗಬಾರದು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಪಾರದರ್ಶಕ ನಡೆ ಹಾಗೂ ಮುಕ್ತವಾಗಿ ಮಾಹಿತಿ ಹಂಚಿಕೊಳ್ಳುವುದು ತೀರಾ ಅಗತ್ಯ. ಸರ್ಕಾರವು ಇದ್ದಕ್ಕಿದ್ದಂತೆ, ನಿಗೂಢ ರೀತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳುವುದು ಇದಕ್ಕೆ ವಿರುದ್ಧ. ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ತೀರಾ ಕಡಿಮೆ. ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕೆಲವು ಮಹತ್ವದ ವರ್ಷಾಚರಣೆಗಳ ಕಾರಣದಿಂದಾಗಿ 1972ರಲ್ಲಿ, 1992ರಲ್ಲಿ ಹಾಗೂ 1997ರಲ್ಲಿ ವಿಶೇಷ ಅಧಿವೇಶನಗಳನ್ನು ಕರೆಯಲಾಗಿತ್ತು. 2017ರಲ್ಲಿ ವಿಶೇಷ ಅಧಿವೇಶನ ಕರೆದು ಜಿಎಸ್‌ಟಿ ವ್ಯವಸ್ಥೆಗೆ ಚಾಲನೆ ನೀಡಲಾಗಿತ್ತು. ಈ ವಿಶೇಷ ಅಧಿವೇಶನಗಳನ್ನು ಯಾವ ಕಾರಣಕ್ಕೆ ಕರೆಯಲಾಗುತ್ತಿದೆ ಎಂಬುದನ್ನು ಮುಂಚಿತವಾಗಿ ತಿಳಿಸಲಾಗಿತ್ತು. ಈ ಅಧಿವೇಶನಗಳು ಸಂಸದರ ಪಾಲಿಗೆ ಅಥವಾ ಜನಸಾಮಾನ್ಯರ ಪಾಲಿಗೆ ಧುತ್ತೆಂದು ಎರಗಿ ಬಂದಿರಲಿಲ್ಲ.



ಅಧಿವೇಶನದ ಉದ್ದೇಶವನ್ನು ನಿಗೂಢವಾಗಿ ಇರಿಸುವ ಮೂಲಕ ಕೇಂದ್ರ ಸರ್ಕಾರವು ವಿರೋಧ ಪಕ್ಷಗಳಿಗೆ, ಸಂಸದರಿಗೆ, ಜನಸಾಮಾನ್ಯರಿಗೆ ಅನ್ಯಾಯ ಎಸಗುತ್ತಿದೆ

ವಿಶೇಷ ಅಧಿವೇಶನವನ್ನು ಕರೆದ ಬಗೆಯು ಕೂಡ ಸರಿಯಾದ ರೀತಿಯಲ್ಲಿ ಇರಲಿಲ್ಲ. ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ವಿಶೇಷ ಅಧಿವೇಶನ ಕುರಿತ ಘೋಷಣೆಯನ್ನು ಮೊದಲು ಸಾಮಾಜಿಕ ಜಾಲತಾಣಗಳ ಮೂಲಕ ಮಾಡಿದರು. ಅದಾದ ನಂತರದಲ್ಲಿ ಅಧಿವೇಶನದ ಬಗ್ಗೆ ಸಂಸದರಿಗೆ ತಿಳಿಸಲಾಯಿತು. ಈ ವಿಶೇಷ ಅಧಿವೇಶನದಲ್ಲಿ ಪ್ರಶ್ನೋತ್ತರ ಅವಧಿ ಮತ್ತು ಶೂನ್ಯವೇಳೆ ಇರುವುದಿಲ್ಲ. ಆದರೆ, ಸಂಸದೀಯ ಕಲಾಪಗಳಲ್ಲಿ ಇವು ಬಹುಮುಖ್ಯ. ಅಧಿವೇಶನದಲ್ಲಿ ಚರ್ಚೆಯಾಗುವ ವಿಷಯ ಕುರಿತು ಅನಿಶ್ಚಿತತೆ ಹೆಚ್ಚುವಂತೆ ಮಾಡಿದ ನಂತರವೂ ಕೇಂದ್ರವು ಅಧಿವೇಶನವನ್ನು ಕರೆದಿರುವ ನಿರ್ದಿಷ್ಟ ಉದ್ದೇಶ ಏನು ಎಂಬುದರ ಬಗ್ಗೆ ಮಾಹಿತಿ ನೀಡಿಲ್ಲ. 'ಅಮೃತ ಕಾಲದಲ್ಲಿ ಫಲಪ್ರದ ಚರ್ಚೆಗಳು ನಡೆಯುವ ನಿರೀಕ್ಷೆ ಸರ್ಕಾರದ್ದು' ಎಂದಷ್ಟೇ ಸಚಿವ ಜೋಶಿ ಹೇಳಿದ್ದಾರೆ. ಈ ಗೋಪ್ಯತೆಯು ಸರ್ಕಾರದ ಉದ್ದೇಶದ ಬಗ್ಗೆ ಊಹೆಗಳು ಹುಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಮಾಧ್ಯಮ, ಸಂಸದರು, ರಾಜಕಾರಣಿಗಳು ಮತ್ತು ಇತರರು ಇಂಥದ್ದೊಂದು ಮಹತ್ವದ ವಿಚಾರದ ಬಗ್ಗೆ ಊಹಾಪೋಹಗಳನ್ನು ನೆಚ್ಚಿಕೊಳ್ಳಬೇಕಾದ ಸ್ಥಿತಿ ಎದುರಾಗಿರುವುದು ತೀರಾ ದುರದೃಷ್ಟಕರ.

ಅಧಿವೇಶನದ ಉದ್ದೇಶವನ್ನು ನಿಗೂಢವಾಗಿ ಇರಿಸುವ ಮೂಲಕ ಕೇಂದ್ರ ಸರ್ಕಾರವು ವಿರೋಧ ಪಕ್ಷಗಳಿಗೆ, ಸಂಸತ್ತಿನ ಸದಸ್ಯರಿಗೆ ಹಾಗೂ ಜನಸಾಮಾನ್ಯರಿಗೆ ಅನ್ಯಾಯ ಎಸಗುತ್ತಿದೆ. ಅಧಿವೇಶನವೊಂದರಲ್ಲಿ ಯಾವೆಲ್ಲ ವಿಚಾರಗಳು ಚರ್ಚೆಯಾಗುತ್ತವೆ ಎಂಬುದನ್ನು ಸಮಿತಿಯೊಂದು ತೀರ್ಮಾನಿಸುವುದು ವಾಡಿಕೆ. ಆ ವಿಚಾರಗಳನ್ನು ಮೊದಲೇ ಬಹಿರಂಗಪಡಿಸಲಾಗುತ್ತದೆ. ಹಾಗೆ ಮಾಡಿದಾಗ ಪಕ್ಷಗಳಿಗೆ ಹಾಗೂ ಸದಸ್ಯರಿಗೆ ನಿರ್ದಿಷ್ಟ ವಿಷಯಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ, ಚರ್ಚೆಗೆ ಸಿದ್ಧವಾಗುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಅಗತ್ಯ ಮಾಹಿತಿಯನ್ನು ಕೊಡದೆ, ಎಲ್ಲರೂ ಊಹೆಗಳ ಆಧಾರದಲ್ಲಿ ಸಿದ್ಧತೆ ನಡೆಸಿಕೊಳ್ಳಲಿ ಎಂದು ಬಯಸುವುದು ತಪ್ಪು. ಹೀಗೆ ಮಾಡುವುದು ಸಂಸತ್ತು ಹಾಗೂ ಜನರಿಗೆ ತೋರುವ ಅಗೌರವ. ಇನ್ನೊಬ್ಬರ ಮೇಲೆ ವಿಶ್ವಾಸ ಇಲ್ಲದವರು, ಇತರರಿಗಿಂತ ತಮಗೆ ಮಾತ್ರ ಹೆಚ್ಚು ತಿಳಿದಿದೆ ಎಂದು ಭಾವಿಸಿರುವವರಲ್ಲಿ ಗೋಪ್ಯತೆಯನ್ನು ಕಾಯ್ದುಕೊಳ್ಳುವ ಗುಣಗಳು ಹೆಚ್ಚು ಇರುತ್ತವೆ. ಆಡಳಿತ ಹಾಗೂ ಸಾರ್ವಜನಿಕ ವ್ಯವಹಾರಗಳಲ್ಲಿ ಇಂತಹ ನಡೆಗಳು ಇತರರ ಬಗ್ಗೆ ಅಗೌರವ ತೋರುವುದಕ್ಕೆ, ಇತರರಿಗೆ ಅಗತ್ಯ ಅವಕಾಶ ನೀಡದೇ ಇರುವುದಕ್ಕೆ ಸಮವಾಗುತ್ತವೆ. ಇದು ಪ್ರಜಾತಂತ್ರದ ಆಶಯಕ್ಕೆ ವಿರುದ್ಧ.




Officers Adda

- ಸಂಸತ್ತಿನ ವಿಶೇಷ ಅಧಿವೇಶನ ಗೌಪ್ಯತೆಯು ಗೌರವಕ್ಕೆ ಸಮ

- ಕೇಂದ್ರ ಸರ್ಕಾರವು ಈ ತಿಂಗಳ 18ರಿಂದ 22ರ ವರೆಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ಆಶ್ಚರ್ಯ ಮೂಡಿಸುವಂತದ್ದು, ಅಲ್ಲದೆ ವಿಶೇಷ ಅಧಿವೇಶನವನ್ನು ಕರೆದಿರುವ ಕಾರಣ ಏನಿರಬಹುದು ಎಂಬ ಬಗ್ಗೆ ಹಲವು ಪ್ರಶ್ನೆಗಳನ್ನು ಮೂಡಿಸುವಂತಿದೆ.

Officers Adda



- ಗೌಪ್ಯವಾಗಿ ತೀರ್ಮಾನಗಳನ್ನು ಕೈಗೊಳ್ಳುವುದು ಅಥವಾ ಅನಿರೀಕ್ಷಿತವಾಗಿ ನಿರ್ಧಾರ ಕೈಗೊಳ್ಳುವುದು ಪ್ರಜಾತಂತ್ರ ವ್ಯವಸ್ಥೆಯ ಪಾಲಿಗೆ ಸಹಜ ಎಂಬಂತೆ ಆಗಬಾರದು .

- ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಪಾರದರ್ಶಕ ನಡೆ ಹಾಗೂ ಮುಕ್ತವಾಗಿ ಮಾಹಿತಿ ಹಂಚಿಕೊಳ್ಳುವುದು ತೀರಾ ಅಗತ್ಯ.

- ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ತೀರಾ ಕಡಿಮೆ. ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕೆಲವು ಮಹತ್ವದ ವರ್ಷಾಚರಣೆಗಳ ಕಾರಣದಿಂದ 1972 ರಲ್ಲಿ, 1992 ರಲ್ಲಿ ಹಾಗೂ 1997ರಲ್ಲಿ ವಿಶೇಷ ಅಧಿವೇಶನಗಳನ್ನು ಕರೆಯಲಾಗಿತ್ತು.

- 2017 ರಲ್ಲಿ ವಿಶೇಷ ಅಧಿವೇಶನ ಕರೆದು ಜಿಎಸ್ಟಿ ವ್ಯವಸ್ಥೆಗೆ ಚಾಲನೆ ನೀಡಲಾಗಿತ್ತು. ಈ ವಿಶೇಷ ಅಧಿವೇಶನಗಳನ್ನು ಯಾವ ಕಾರಣಕ್ಕೆ ಕರೆಯಲಾಗುತ್ತಿದೆ ಎಂಬುದನ್ನು ಮುಂಚಿತವಾಗಿ ತಿಳಿಸಲಾಗಿತ್ತು.

Officers Adda



# ಚಂದ್ರಯಾನ-3 ಸೆಂಚುರಿ

ಚಂದ್ರಯಾನ-3 ರೋವರ್ 'ಪ್ರಜ್ಞಾನ್' ಚಂದ್ರನ ಮೇಲೆ ಮತ್ತೊಂದು ಮೈಲುಗಲ್ಲು ಸಾಧಿಸಿದೆ. ಆ.23ರಂದು ಲ್ಯಾಂಡಿಂಗ್ ಬಳಿಕ ರೋವರ್ ಚಂದ್ರನ ಅಂಗಳದಲ್ಲಿ 100 ಮೀಟರ್‌ಗಿಂತಲೂ ಹೆಚ್ಚು ದೂರ ಕ್ರಮಿಸಿದೆ ಎಂದು ಇಸ್ರೊ ಟ್ವೀಟ್ ಮೂಲಕ ಘೋಷಿಸಿದೆ.



**ವಿಕ್ರಮ್, ಪ್ರಜ್ಞಾನ್ ನಿದ್ರೆಯ ಸಮಯ:** ರೋವರ್ ವಿಕ್ರಮ್ ಮತ್ತು ಲ್ಯಾಂಡರ್ ಪ್ರಜ್ಞಾನ್ ಅನ್ನು ಸ್ವಿಚ್ ಆಫ್ ಮಾಡಿ ನಿದ್ರೆಗೆ ಜಾರಿಸುವ ಪ್ರಕ್ರಿಯೆಯು ಒಂದು ಅಥವಾ ಎರಡು ದಿನದಲ್ಲಿ ಪ್ರಾರಂಭವಾಗಲಿದೆ ಎಂದು ಇಸ್ರೊ ಹೇಳಿದೆ. ಭೂಮಿಯ ಮೇಲೆ 14 ದಿನಗಳಿಗೆ ಚಂದ್ರನ ಮೇಲಿನ ಒಂದು ಹಗಲು ಸಮಾನವಾಗಿದ್ದು, ಹಗಲಿನಲ್ಲಿ ಮಾತ್ರ ಸೌರಶಕ್ತಿ ನೆರವಿನಿಂದ ಲ್ಯಾಂಡರ್ ಮತ್ತು ರೋವರ್ ಕೆಲಸ ಮಾಡುತ್ತವೆ. ರಾತ್ರಿ ವೇಳೆ ಇವುಗಳಿಗೆ ಶಕ್ತಿ ಮೂಲ ಇರುವುದಿಲ್ಲ. ಅಲ್ಲದೆ ರಾತ್ರಿ ವೇಳೆ ಚಂದ್ರನ ಮೇಲಿನ ಉಷ್ಣಾಂಶ ಮೈನಸ್ 250 ಡಿಗ್ರಿಗಿಂತ ಕಡಿಮೆಯಾಗುವುದರಿಂದ ಉಪಕರಣಗಳು ಹಾಳಾಗುವ ಸಾಧ್ಯತೆಯಿದೆ. ಹೀಗಾಗಿ ಇವುಗಳನ್ನು ತಾತ್ಕಾಲಿಕವಾಗಿ ನಿಷ್ಕ್ರಿಯಗೊಳಿಸಿ, 14 ದಿನಗಳ ಬಳಿಕ (1 ರಾತ್ರಿ) ಮರುಚಾಲನೆ ಮಾಡಲು ಇಸ್ರೊ ಯೋಜಿಸಿದೆ.



ಯಶಸ್ವಿ ಉಡಾವಣೆ ಬಳಿಕ ಇಸ್ರೊ ಮುಖ್ಯಸ್ಥ ಸೋಮನಾಥ್ ಜತೆಗೆ ವಿಜ್ಞಾನಿಗಳನ್ನು ಅಭಿನಂದಿಸಿದ ಕೇಂದ್ರ ಸಚಿವ ಜಿತೇಂದ್ರ ಸಿಂಗ್.

## ಮುಂದಿನ ಯೋಜನೆಗಳೇನು?

- ಎಕ್ಸ್‌ಪೊಸ್ಯಾಟ್ (ಎಕ್ಸ್‌ರೇ ಪೋಲಾರಿಮೀಟರ್ ಸ್ಯಾಟಲೈಟ್) ಇಸ್ರೊದ ಮುಂದಿನ ಗುರಿಯಾಗಿದೆ. ಭಾರತದಿಂದ ಇಂತಹ ಮೊದಲ ಯೋಜನೆ ಇದಾಗಿದೆ.
- ಕಪ್ಪುಕುಳಿಗಳು, ನ್ಯೂಟ್ರಾನ್ ನಕ್ಷತ್ರಗಳು, ಗ್ಯಾಲಕ್ಸಿಯ ಕೇಂದ್ರಬಿಂದುಗಳು ಮುಂತಾದೆಡೆಯಿಂದ ಹೊರಹೊಮ್ಮುವ ಬಾಹ್ಯಾಕಾಶ ಎಕ್ಸ್-ರೇ ಮೂಲಗಳ ಬಲ ಮತ್ತು ಚಲನೆಯನ್ನು ಅರ್ಥಮಾಡಿಕೊಳ್ಳುವುದು ಇದರ ಉದ್ದೇಶವಾಗಿದೆ.
- ಈ ಗಗನನೌಕೆಯಲ್ಲಿ ಎರಡು ಪೇಲೋಡ್‌ಗಳು ಇರಲಿದ್ದು, ಈಗಾಗಲೇ ಇದರ ಉಡ್ಡಯನಕ್ಕೆ ಸಕಲ ಸಿದ್ಧತೆಗಳು ನಡೆದಿವೆ ಎಂದು ಇಸ್ರೊ ಹೇಳಿದೆ.



Adda

Officers Adda

- **ಚಂದ್ರಯಾನ 3 ಸೆಂಚುರಿ**

- ಚಂದ್ರಯಾನ–3 ರೋವರ್ ಪ್ರಜ್ಞಾನ್ ಚಂದ್ರನ ಮೇಲೆ ಮತ್ತೊಂದು ಮೈಲುಗಲ್ಲು ಸಾಧಿಸಿದೆ. ಆಗಸ್ಟ್ 23 ರಂದು ಲ್ಯಾಂಡಿಂಗ್ ಬಳಿಕ ರೋವರ್ ಚಂದ್ರನ ಅಂಗಳದಲ್ಲಿ **100 ಮೀಟರ್ ಗಿಂತಲೂ ಹೆಚ್ಚು ದೂರಕ್ರಮಿಸಿದೆ** . ಎಂದು ಇಸ್ರೋ ಟ್ವೀಟ್ ಮೂಲಕ ಘೋಷಿಸಿದೆ.

- **ಎಕ್ಸ್ ಪೋಸ್ಯಾಟ್** (ಎಕ್ಸ್ ರೇ ಪೋಲಾರಿ ಮೀಟರ್ ಸ್ಯಾಟಲೈಟ್ ) ಇಸ್ರೋದ ಮುಂದಿನ ಗುರಿಯಾಗಿದೆ. ಭಾರತದಿಂದ ಇಂತಹ ಮೊದಲ ಯೋಜನೆ ಇದಾಗಿದೆ.

- **ಕಪ್ಪುಕುಳಿಗಳು, ನ್ಯೂಟ್ರಾನ್ ನಕ್ಷತ್ರಗಳು , ಗ್ಯಾಲಕ್ಸಿಯ ಕೇಂದ್ರ ಬಿಂದುಗಳು ಮುಂತಾದಡೆಯಿಂದ ಹೊರಹೊಮ್ಮುವ ಬಾಹ್ಯಾಕಾಶ ಎಕ್ಸ್ ರೇ** ಮೂಲಗಳ ಬಲ ಮತ್ತು ವಂಚನೆಯನ್ನು ಅರ್ಥಮಾಡಿಕೊಳ್ಳುವುದು ಇದರ ಉದ್ದೇಶವಾಗಿದೆ.

- ಈ ಗಗನ ನೌಕೆಯಲ್ಲಿ ಎರಡು ಪೇ ಲೋಡ್ ಗಳು ಇರಲಿದ್ದು, ಈಗಾಗಲೇ ಇದರ ಉಡ್ಡಯನಕ್ಕೆ ಸಕಲ ಸಿದ್ಧತೆಗಳು ನಡೆದಿವೆ ಎಂದು ಇಸ್ರೋ ಹೇಳಿದೆ.

Officers Adda



# ONE LINERS

Officers Adda

- ಸೆಪ್ಟೆಂಬರ್ 05 ರಂದು 'ರಾಷ್ಟ್ರೀಯ ಶಿಕ್ಷಕರ ದಿನ' ವನ್ನು ಆಚರಿಸಲಾಗುತ್ತದೆ .
- ಸೆಪ್ಟೆಂಬರ್ 05 ರಂದು 'ಅಂತರರಾಷ್ಟ್ರೀಯ ಚಾರಿಟಿ ದಿನ' ವನ್ನು ಆಚರಿಸಲಾಗುತ್ತದೆ.
- ಇತ್ತೀಚಿಗೆ ಸುದ್ದಿಯಲ್ಲಿದ್ದ ವಿಶ್ವವಿಖ್ಯಾತ 'ಶ್ರಾವಣಿ ಮೇಳ' ಜಾರ್ಖಂಡ್ ರಾಜ್ಯದಲ್ಲಿ ನಡೆಯುತ್ತದೆ.
- ಇತ್ತೀಚೆಗೆ,2023ರ ಎರಡನೇ 'ನೇವಿ ಕಮಾಂಡರ್ಸ್'ಸಮ್ಮೇಳನವು ನವದೆಹಲಿಯಲ್ಲಿ ಪ್ರಾರಂಭವಾಗಿದೆ.

Officers Adda

- 'Share(dot)Market' ಎಂಬ ಹೊಸ ಮೊಬೈಲ್ ಅಪ್ಲಿಕೇಶನ್ ಅನ್ನು PhonePe ಕಂಪನಿ ಪ್ರಾರಂಭಿಸಿದೆ.

- ರಾಷ್ಟ್ರೀಯ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ (RCF)ಗೆ ಭಾರತ ಸರ್ಕಾರವು ನವರತ್ನ ಸ್ಥಾನಮಾನವನ್ನು ನೀಡಿದೆ.

- ಇತ್ತೀಚೆಗೆ ಉತ್ತರ ಪ್ರದೇಶ ರಾಜ್ಯದಲ್ಲಿ 'ರಾಮಾಯಣ ಪಾರ್ಕ್' ನಿರ್ಮಾಣವಾಗಲಿದೆ.

Officers Adda

- ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'Akshar River Cruise'ಅನ್ನು ಗುಜರಾತ್ ನಲ್ಲಿ ಪ್ರಾರಂಭಿಸಿದ್ದಾರೆ.
- ಖೇಲೋ ಇಂಡಿಯಾ ಮಹಿಳಾ ಲೀಗ್‌ನ (Khelo India Women's League) ಹೊಸ ಹೆಸರು Empowered Women League'
- ಇತ್ತೀಚೆಗೆ ಸುದ್ದಿಯಲ್ಲಿ ಕಂಡುಬರುವ"Great Himalayan National Park"(GHNP) ಹಿಮಾಚಲ ಪ್ರದೇಶ ರಾಜ್ಯದಲ್ಲಿದೆ.

Officers Adda

- ಭಾರತವು ವಿಶ್ವದ ಮೊದಲ ಪೋರ್ಟಬಲ್ ಆಸ್ಪತ್ರೆಯನ್ನು ನಿರ್ಮಿಸಿದೆ,ಅದರ ಹೆಸರು
- ಆರೋಗ್ಯ ಮೈತ್ರಿ ಕ್ಯೂಬ್ (Aarogya Maitri Cube)

- ಮಹಿಳಾ ಸ್ವಸಹಾಯ ಗುಂಪುಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಗ್ರಾಮೀಣಾಭಿವೃದ್ಧಿ ಸಚಿವಾಲಯವು e-Saras app ಎಂಬ ಮೊಬೈಲ್ ಅಪ್ಲಿಕೇಶನ್ ಅನ್ನು ಪ್ರಾರಂಭಿಸಿದೆ.

Officers Adda

- "My Bill My Right"ಯೋಜನೆಯನ್ನು
- ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಕೇಂದ್ರೀಯ ಮಂಡಳಿ (CBIC)
- -> Chairman:- Sanjay Kumar Agarwal
- ಮಂಡಳಿಯು ಪ್ರಾರಂಭಿಸಿದೆ.


- ಭಾರತೀಯ ಪುರಾತತ್ವ ಸಮೀಕ್ಷೆಯು (ASI)ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು"ಅಡಾಪ್ಟ್ ಎ ಹೆರಿಟೇಜ್ 2.0 ಪ್ರೋಗ್ರಾಂ"(**Adopt a Heritage 2.0 Programme)**ಅನ್ನು ಪ್ರಾರಂಭಿಸಲಾಗಿದೆ.

- 43ನೇ ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟದ (ASEAN)ಶೃಂಗಸಭೆ (ಸೆಪ್ಟೆಂಬರ್ 5 ರಿಂದ 7)

- ಇಂಡೋನೇಷ್ಯಾದ ಜಕಾರ್ತಾ
- -–> ASEAN ನ ಸದಸ್ಯ ರಾಷ್ಟ್ರಗಳು
- **Brunei, Cambodia, Indonesia, Laos, Malaysia, Myanmar, the Philippines, Singapore, Thailand, and Vietnam**
- ನಡೆಯಲಿದೆ.

Officers Adda

# GOLDEN THOUGHT



# ಹಿಂದಿನ ಪ್ರಚಲಿತ ವಿದ್ಯಮಾನಗಳ ಆಧಾರಿತ ಪ್ರಶ್ನೆಗಳು

1) ಇತ್ತೀಚೆಗೆ ಯಾವ ದೇಶವು "Petersburg Climate Dialogue“ ಅನ್ನು ಆಯೋಜಿಸಿದೆ.?

1) ಜರ್ಮನಿ

2) ರಷ್ಯಾ

3) ಚೀನಾ

4) ಭಾರತ

Officers Adda

2) ಏಷ್ಯನ್ ಕಬಡ್ಡಿ ಚಾಂಪಿಯನ್‌ಶಿಪ್–2023 ರ ವಿಜೇತ ತಂಡ ಯಾವುದು?

1) ಭಾರತ

2) ಅಮೆರಿಕ

3) ಬ್ರೆಜಿಲ್

4) ಜಪಾನ್

Officers Adda

3) ವಿಶ್ವಸಂಸ್ಥೆಯ ಮಕ್ಕಳ ನಿಧಿ (UNICEF) ಪ್ರಕಾರ, ಈ ಕೆಳಗಿನ ಯಾವ ದೇಶವು ಹೆಚ್ಚು ಶಸ್ತ್ರಾಸ್ತ್ರ-ಕಲುಷಿತ ದೇಶಗಳಲ್ಲಿ ಒಂದಾಗಿದೆ?

1) ಅಫ್ಘಾನಿಸ್ತಾನ್

2) ಭಾರತ

3) ಪಾಕಿಸ್ತಾನ್

4) ಮೇಲಿನ ಯಾವುದೂ ಅಲ್ಲ

Officers Adda

4) ಇತ್ತೀಚೆಗೆ ಸುದ್ದಿಯಲ್ಲಿದ್ದ "ಧಂಗಾರಿ ಗಜ"ಸಾಂಪ್ರದಾಯಿಕ/ಜಾನಪದ ನೃತ್ಯವು ಈ ಕೆಳಗಿನ ಯಾವ ರಾಜ್ಯಕ್ಕೆ ಸೇರಿದೆ?

1) ಮಧ್ಯ ಪ್ರದೇಶ

2) ಮಹಾರಾಷ್ಟ್ರ

3) ಗುಜರಾತ್

4) ಕರ್ನಾಟಕ

Officers Adda

# ಪ್ರಚಲಿತ ವಿದ್ಯಮಾನಗಳ ಆಧಾರಿತ ಪ್ರಶ್ನೆಗಳು

**1)ಇತ್ತೀಚಿಗೆ ಸುದ್ದಿಯಲ್ಲಿದ್ದ ವಿಶ್ವವಿಖ್ಯಾತ 'ಶ್ರಾವಣಿ ಮೇಳ' ಎಲ್ಲಿ ನಡೆಯುತ್ತದೆ?**

1) ಜಾರ್ಖಂಡ್

2) ಮಧ್ಯ ಪ್ರದೇಶ್

3) ಮಹಾರಾಷ್ಟ್ರ

4) ಆಂಧ್ರ ಪ್ರದೇಶ್

Officers Adda

**2)ಇತ್ತೀಚೆಗೆ,2023ರ ಎರಡನೇ 'ನೇವಿ ಕಮಾಂಡರ್ಸ್'ಸಮ್ಮೇಳನವು ಈ ಕೆಳಗಿನ ಯಾವ ಸ್ಥಳದಲ್ಲಿ ಪ್ರಾರಂಭವಾಗಿದೆ ?**

1) ನವದೆಹಲಿ

2) ಅಹಮದಾಬಾದ್

3) ಅಲಹಾಬಾದ್

4) ಬೆಂಗಳೂರು

Officers Adda

Officers Adda

3)'Share(dot)Market' ಎಂಬ ಹೊಸ ಮೊಬೈಲ್ ಅಪ್ಲಿಕೇಶನ್ ಅನ್ನು ಯಾವ ಕಂಪನಿ ಪ್ರಾರಂಭಿಸಿದೆ?

1) PhonePe

2) Google pay

3) Paytm

4) ಮೇಲಿನ ಯಾವುದೂ ಅಲ್ಲ

Officers Adda

Officers Adda

4) ಇತ್ತೀಚೆಗೆ,ಯಾವ ರಾಜ್ಯದಲ್ಲಿ 'ರಾಮಾಯಣ ಪಾರ್ಕ್' ನಿರ್ಮಾಣವಾಗಲಿದೆ ?

1) ಉತ್ತರ ಪ್ರದೇಶ

2) ಮಧ್ಯ ಪ್ರದೇಶ್

3) ತೆಲಂಗಾಣ

4) ತಮಿಳುನಾಡು

Officers Adda

Officers Adda

OFFICERS ADDA

# DRUSHTI 3.0

SPECIAL COURSE FOR 2 YEARS CURRENT AFFAIRS

(2022 & 2023)

SUBJECT WISE CURRENT AFFAIRS VIDEOS

2000+ VIDEOS

MONTHLY AND YEARLY SUBJECT WISE PDF

WEEKLY TEST ON DAILY CURRENT AFFAIRS

LAST DATE TO JOIN

SEPT 10,2023

CONTACT

8217546761 / 8217583629

# LAST DATE TO JOIN

# SEPT 10, 2023

Officers Adda

LOWEST FEES IN KARNATAKA

WITH HEIGHEST QUALITY

# Contact no

**8217546761**
**8217583629**

Officers Adda

**Officers Adda**
61.1K subscribers

Kannada Medium Current Affairs for all competitive exams (PC to DC) by BHARAT sir
For more updates subscribe to
OFFICERS ADDA telegram and You tube channel

Officers Adda Telegram channel :

https://t.me/officersadda

Course Details :

https://drive.google.com/file/d/1GuP8...

app link :

https://play.google.com/store/apps/de...

follow us on insta :

https://www.instagram.com/officersadd...

Telegram channel for essay and answers writing :

https://t.me/Art_Of_Answer_Writing1

June Current Affairs :

https://drive.google.com/file/d/1JROE...

oct current affairs :

https://drive.google.com/file/d/1KePH...

december current affairs:




IndianMoney's Finan... Ad 4.2 ★ FREE INSTALL

#Daily#Kannadamedium #Top10MCQ #BharatSir #short

2.3K views · Streamed 23 hours ago

226 | 3 | Live chat | Share | Dowi

Officers Adda
61.1K subscribers
SUBSCRIBED

# THANK YOU

Officers Adda

-BY BHARAT C N